بِسْمِ اللهِ الرَّحْمٰنِ الرَّحِیْمِ    نَحْمَدُہٗ وَنُصَلِّیْ عَلٰی رَسُوْلِہِ الْکَرِیْمِ    وَعَلٰی عَبْدِہِ الْمَسِیْحِ الْمَوْعُوْد

وَلَقَدْ نَصَرَکُمُ اللّٰہُ بِبَدْرٍ وَّاَنْتُمْ اَذِلَّۃٌ

ವರ್ಷ: 04

ಕನ್ನಡ
# ಬದರ್
ವಾರ ಪತ್ರಿಕೆ
WEEKLY BADAR QADIAN KANNADA

ಸಂಚಿಕೆ: 16

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

20 ಏಪ್ರೆಲ್ 2023, 20 ಶಹಾದತ್ 1402 ಹಿಜರಿ ಶಮ್‌ಸಿ,
28 ರಮಝಾನ್ 1444 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰھُمَّ اَیِّدْ اِمَامَنَا بِرُوْحِ الْقُدُسِ
وَبَارِکْ لَنَا فِیْ عُمُرِہٖ وَاَمْرِہٖ

## ಅಲ್ಲಾಹನ ಉಪದೇಶ

شَھْرُ رَمَضَانَ الَّذِیْٓ اُنْزِلَ فِیْہِ الْقُرْاٰنُ
ھُدًی لِّلنَّاسِ وَبَیِّنٰتٍ مِّنَ الْھُدٰی وَالْفُرْقَانِ ۚ
فَمَنْ شَھِدَ مِنْکُمُ الشَّھْرَ فَلْیَصُمْہُ (بقرہ:186)

**(ಆಲ್-ಬಖರ: 186)**

**ಅಂದರೆ: ಸಕಲ ಮಾನವರಿಗೆ ಸನ್ಮಾರ್ಗ ದರ್ಶಕವಾದ, ಮಾರ್ಗದರ್ಶನ ಮತ್ತು ಸತ್ಯಾಸತ್ಯ ವಿವೇಚನೆಯ ಸ್ಪಷ್ಟವಾದ ಸಾಕ್ಷ್ಯಗಳಿಂದ ಕೂಡಿದ ಖುರ್‌ಆನ್ ಅವತೀರ್ಣವಾದ ಮಾಸವಾಗಿದೆ ರಮಝಾನ್. ಆದ್ದರಿಂದ ನಿಮ್ಮ ಪೈಕಿ ಯಾರಾದರೂ ಈ ಮಾಸವನ್ನು ಪಡೆದರೆ ಆತನು ಅದರಲ್ಲಿ ಉಪವಾಸ ಮಾಡಲಿ.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಉಪವಾಸಕ್ಕೆ ಸುಳ್ಳು ಹಾನಿಕಾರಕ ವಿಷವಾಗಿದೆ

**(1903)** ಹ಼ರ್ಝ್‌ರತ್ ಅಬುಹುರೈರಾ(ರ) ಅವರು ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ಹೇಳಿದರು: ಒಬ್ಬ ವ್ಯಕ್ತಿ ಸುಳ್ಳು ಹೇಳುವುದನ್ನು ಮತ್ತು ಸುಳ್ಳನ್ನು ಅಭ್ಯಾಸ ಮಾಡುವುದನ್ನು ನಿಲ್ಲಿಸದಿದ್ದರೆ, ಅಂತಹ ವ್ಯಕ್ತಿಯು ಅಲ್ಲಾಹನಿಗೋಸ್ಕರ ತಿನ್ನುವುದು ಮತ್ತು ಕುಡಿಯುವುದನ್ನು ನಿಲ್ಲಿಸುವ ಅಗತ್ಯವಿಲ್ಲ.

### ಉಪವಾಸಿಗನಿಗೆ ಅಗತ್ಯವಾದ ಸೂಚನೆಗಳು

**(1904)** ಹ಼ರ್ಝ್‌ರತ್ ಅಬುಹುರೈರಾ(ರ) ಅವರು ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ಹೇಳಿದರು: ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: (ಇಬ್ನೆ ಆದಮ್‌ನ) ಮನುಷ್ಯನ ಪ್ರತಿಯೊಂದು ಕ್ರಿಯೆಯು ಅವನಿಗಾಗಿ ಆಗಿದೆ. ಆದರೆ ಉಪವಾಸವನ್ನು ಹೊರತುಪಡಿಸಿ, ಏಕೆಂದರೆ ಅದು ನನಗಾಗಿದೆ ನಾನು ಅದರ ಪ್ರತಿಫಲವಾಗಿದ್ದೇನೆ ಮತ್ತು ಉಪವಾಸವು ಗುರಾಣಿಯಾಗಿದೆ ಮತ್ತು ನಿಮ್ಮಲ್ಲಿ ಯಾರಾದರೂ ಉಪವಾಸವನ್ನು ಅನುಷ್ಠಿಸಿದರೆ, ಅವನು ಅಶ್ಲೀಲವಾಗಿ ಮಾತನಾಡಬಾರದು ಅಥವಾ ಯಾವುದೇ ಗಲಾಟೆ ಮಾಡಬಾರದು ಮತ್ತು ಯಾರಾದರೂ ಅವನನ್ನು ನಿಂದಿಸಿದರೆ ಅಥವಾ ಜಗಳವಾಡಿದರೆ, ಅವನು ಹೇಳಬೇಕು: ನಾನು ಉಪವಾಸ ಮಾಡುವವನಾಗಿದ್ದೇನೆ. ಮತ್ತು ಮುಹಮ್ಮದ್(ಸ)ರ ಆತ್ಮ ಯಾರ ಕೈಯಲ್ಲಿದೆಯೋ ಅವನ ಆಣೆ! ಖಂಡಿತವಾಗಿಯೂ ಉಪವಾಸಿಗನ ಬಾಯಿಯ ವಾಸನೆಯು ಅಲ್ಲಾಹನಿಗೆ ಕಸ್ತೂರಿಯ ವಾಸನೆಗಿಂತ ಹೆಚ್ಚು ಇಷ್ಟವಾಗುತ್ತದೆ. ಉಪವಾಸ ಮಾಡುವವನಿಗೆ ಎರಡು ಸಂತೋಷಗಳು ಅವನನ್ನು ಸಂತೋಷಪಡಿಸುತ್ತವೆ. ಮೊದಲನೆಯ ಸಂತೋಷವೆಂದರೆ ಅವನು ಇಫ್ತಾರ್ (ಉಪವಾಸವನ್ನು ಮುರಿಯುವ ಸಮಯ) ಮಾಡುವಾಗ ಆಗುತ್ತದೆ ಮತ್ತು ಎರಡನೆಯದು ಅವನು ತನ್ನ ಸೃಷ್ಟಿಕರ್ತನನ್ನು ಭೇಟಿಯಾದಾಗ ಅವನು ತನ್ನ ಉಪವಾಸದ ಕಾರಣದಿಂದಾಗಿ ಸಂತೋಷ ಪಡುತ್ತಾನೆ.

**(ಸಹೀಹ್ ಬುಖಾರಿ, ಸಂಪುಟ-3, ಕಿತಾಬುಸ್ಸೌಮ್, 2008 ಖಾದಿಯಾನ್‌ನಲ್ಲಿ ಪ್ರಕಟಿತ)**

فَمَنْ شَھِدَ مِنْکُمُ الشَّھْرَ فَلْیَصُمْہُ ؕ

## ನಿಮ್ಮ ಪೈಕಿ ಯಾರಾದರೂ ಈ ಮಾಸವನ್ನು ಪಡೆದರೆ ಆತನು ಅದರಲ್ಲಿ ಉಪವಾಸ ಮಾಡಲಿ.

اللہ تعالیٰ قرآن کریم میں فرماتا ہے:: شَھْرُ رَمَضَانَ الَّذِیْٓ اُنْزِلَ فِیْہِ الْقُرْاٰنُ ھُدًی لِّلنَّاسِ وَبَیِّنٰتٍ مِّنَ الْھُدٰی وَالْفُرْقَانِ ۚ فَمَنْ شَھِدَ مِنْکُمُ الشَّھْرَ فَلْیَصُمْہُ ؕ وَمَنْ کَانَ مَرِیْضًا اَوْ عَلٰی سَفَرٍ فَعِدَّۃٌ مِّنْ اَیَّامٍ اُخَرَ ؕ یُرِیْدُ اللّٰہُ بِکُمُ الْیُسْرَ وَلَا یُرِیْدُ بِکُمُ الْعُسْرَ ۫ وَلِتُکْمِلُوا الْعِدَّۃَ وَلِتُکَبِّرُوا اللّٰہَ عَلٰی مَا ھَدٰىکُمْ وَلَعَلَّکُمْ تَشْکُرُوْنَ ﴿۱۸۶﴾ وَاِذَا سَاَلَکَ عِبَادِیْ عَنِّیْ فَاِنِّیْ قَرِیْبٌ ؕ اُجِیْبُ دَعْوَۃَ الدَّاعِ اِذَا دَعَانِ ۙ فَلْیَسْتَجِیْبُوْا لِیْ وَلْیُؤْمِنُوْا بِیْ لَعَلَّھُمْ یَرْشُدُوْنَ ﴿۱۸۷﴾ (بقرہ: 186-187)

ಅಂದರೆ :: ಸಕಲ ಮಾನವರಿಗೆ ಸನ್ಮಾರ್ಗ ದರ್ಶಕವಾದ, ಮಾರ್ಗದರ್ಶನ ಮತ್ತು ಸತ್ಯಾಸತ್ಯ ವಿವೇಚನೆಯ ಸ್ಪಷ್ಟವಾದ ಸಾಕ್ಷ್ಯಗಳಿಂದ ಕೂಡಿದ ಖುರ್‌ಆನ್ ಅವತೀರ್ಣವಾದ ಮಾಸವಾಗಿದೆ ರಮಝಾನ್. ಆದ್ದರಿಂದ ನಿಮ್ಮ ಪೈಕಿ ಯಾರಾದರೂ ಈ ಮಾಸವನ್ನು ಪಡೆದರೆ ಆತನು ಅದರಲ್ಲಿ ಉಪವಾಸ ಮಾಡಲಿ. ಆದರೆ ಯಾರಾದರೂ ರೋಗಿ ಅಥವಾ ಪ್ರಯಾಣಿಕನಾಗಿದ್ದಲ್ಲಿ ಬೇರೆ ದಿನಗಳಲ್ಲಿ ಆ ಸಂಖ್ಯೆಯನ್ನು ಪೂರ್ತಿಗೊಳಿಸಲಿ.ಅಲ್ಲಾಹನು ನಿಮಗೆ ಸೌಲಭ್ಯವನ್ನು ಇಚ್ಛಿಸುತ್ತಾನೆ; ನಿಮಗೆ ಕಷ್ಟ ಕೊಡಲು ಇಚ್ಛಿಸುವುದಿಲ್ಲ. (ಇದು) ನೀವು ಸಂಖ್ಯೆಯನ್ನು ಪೂರ್ಣಗೊಳಿಸಲಿಕ್ಕೂ ನಿಮಗೆ ಮಾರ್ಗದರ್ಶನ ಮಾಡಿದುದಕ್ಕಾಗಿ ಅಲ್ಲಾಹನ ಸ್ತುತಿಕೀರ್ತನ ಮಾಡಲಿಕ್ಕೂ ನೀವು ಕೃತಜ್ಞತೆ ಸೂಚಿಸಲಿಕ್ಕೂ ಆಗಿದೆ. (ಎಲೈ ಪ್ರವಾದಿ,) ನನ್ನ ಬಗ್ಗೆ ನನ್ನ ದಾಸರು ನಿನ್ನೊಡನೆ ಕೇಳಿದರೆ (ಹೇಳು)- ಖಂಡಿತವಾಗಿಯೂ ನಾನು ಸಮೀಪದಲ್ಲೇ ಇದ್ದೇನೆ. ನನ್ನನ್ನು ಕರೆದು ಪ್ರಾರ್ಥಿಸುವಾಗ ಪ್ರಾರ್ಥಿಸುವವನ ಪ್ರಾರ್ಥನೆಗೆ ನಾನು ಉತ್ತರ ನೀಡುವೆನು. ಆದ್ದರಿಂದ ಅವರು ಸತ್ಪಥವನ್ನು ಪಡೆಯಲಿಕ್ಕಾಗಿ ನನ್ನ ಕರೆಗೆ ಓಗೊಡಲಿ ಮತ್ತು ನನ್ನ ಮೇಲೆ ನಂಬಿಕೆ ಇರಿಸಲಿ. (ಅಲ್‌ಬಖರ:186-187)

**ಅಲ್ಲಾಹನು ಸರ್ವಶಕ್ತನಾಗಿದ್ದಾನೆ, ಕ್ಷಯರೋಗಿಗೆ ಬೇಕಿದ್ದರೆ ಉಪವಾಸದ ಶಕ್ತಿಯನ್ನು ನೀಡಬಲ್ಲ ಈ ಪವಿತ್ರ ಮಾಸದಲ್ಲಿ ನೀನು ನನ್ನನ್ನು ವಂಚಿತಗೊಳಿಸಬೇಡ ಎಂದು ಓರ್ವ ವ್ಯಕ್ತಿಯು ಪ್ರಾಮಾಣಿಕವಾಗಿ ಸರ್ವಶಕ್ತನಲ್ಲಿ ಕೇಳಿಕೊಂಡರೆ, ಅಲ್ಲಾಹನು ಅವನನ್ನು ವಂಚಿತಗೊಳಿಸುವುದಿಲ್ಲ.**

**ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ಮನುಷ್ಯನು ತನ್ನ ಸಾಮರ್ಥ್ಯಕ್ಕನುಗುಣವಾಗಿ ಅಲ್ಲಾಹನ ಕರ್ತವ್ಯಗಳನ್ನು ನಿರ್ವಹಿಸುತ್ತಿರಬೇಕು. ಉಪವಾಸದ ಕುರಿತು, ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ನುಡಿಯುತ್ತಾನೆ: **ವಅನ್ ತಸೂಮು ಖೈರುಲ್ಲಕುಮ್** (ಅಲ್-ಬಖರ: 185) ಅಂದರೆ: ನೀವು ಉಪವಾಸವನ್ನು ಅನುಷ್ಠಿಸಿದರೆ ಅದು ನಿಮಗಾಗಿ ಬಹಳ ಅನುಗ್ರಹದಾಯಕವಾಗಿದೆ.

ಫಿದ್ಯ (ಓರ್ವ ನಿರ್ಗತಿಕನಿಗೆ ಆಹಾರ ನೀಡುವುದು) ಏಕೆ ವಿಧಿಸಲ್ಪಟ್ಟಿದೆಯೋ ಎಂದು ಒಮ್ಮೆ ನನ್ನ ಮನಸ್ಸಿಗೆ ಬಂದಿತು, ಆಗ ಅದು ತೌಫೀಖ್ ಪಡೆಯುವುದಕ್ಕೆ ಎಂದು ನನಗೆ ತಿಳಿಯಿತು, ಆದ್ದರಿಂದ ಆತನಿಗೆ ಉಪವಾಸ ಅನುಷ್ಠಾನಕ್ಕೆ ತೌಫೀಖ್ ಸಿಗುತ್ತದೆ. ಸರ್ವಶಕ್ತನಾದ ಅಲ್ಲಾಹನು ಮಾತ್ರ ತೌಫೀಖ್ ನೀಡುವವನಾಗಿದ್ದಾನೆ. ಅದೇ ರೀತಿ ಪ್ರತಿಯೊಂದು ವಸ್ತುವು ಅಲ್ಲಾಹನಿಂದಲೇ ಬಯಸಬೇಕು. ಅಲ್ಲಾಹನು ಸರ್ವಶಕ್ತನಾಗಿದ್ದಾನೆ, ಕ್ಷಯರೋಗಿಗೆ ಬೇಕಿದ್ದರೆ ಉಪವಾಸದ ಶಕ್ತಿಯನ್ನು ನೀಡಬಲ್ಲನು ಆದ್ದರಿಂದ ಫಿದ್ಯದ ಉದ್ದೇಶವು ಆ ಶಕ್ತಿಪಡೆಯುವುದಾಗಿದೆ ಮತ್ತೆ ಇದು ಅಲ್ಲಾಹನ ಅನುಗ್ರಹದಿಂದ ಸಾಧ್ಯವಾಗುತ್ತದೆ. ನನಗೆ ಖಾತ್ರಿ ಇರುವುದೇನೆಂದರೆ ಇದೊಂದು ನಿನ್ನ ಪವಿತ್ರ ಮಾಸವಾಗಿದೆ ಅದರಿಂದ ನಾನು ವಂಚಿತನಾಗುತ್ತಿದ್ದೇನೆ ಮುಂದಿನ ವರ್ಷ ನಾನು ಬದುಕಿರುತ್ತೇನೋ ಇಲ್ಲವೋ ಗೊತ್ತಿಲ್ಲ. ನಾನು ಈ ತಪ್ಪಿದ ಉಪವಾಸಗಳನ್ನು ಮತ್ತೆ ಅನುಷ್ಠಿಸಲು ಸಾಧ್ಯವಾಗುತ್ತದೆಯೋ ಇಲ್ಲವೊ ನನಗೆ ತಿಳಿದಿಲ್ಲ. ಹೀಗೆ ಅವನು ಅಲ್ಲಾಹನಲ್ಲಿ ಸಹಾಯಕ್ಕಾಗಿ ಪ್ರಾರ್ಥಿಸಿದರೆ, ಅಂತಹ ಮನಸ್ಸಿಗೆ ಅಲ್ಲಾಹನು ಶಕ್ತಿಯನ್ನು ನೀಡುತ್ತಾನೆ.

ಅಲ್ಲಾಹನು ಇಚ್ಛಿಸಿದ್ದರೆ, ಅವನು ಇತರ ಉಮ್ಮತ್‌ಗಳಂತೆ ಈ ಉಮ್ಮತಿನಲ್ಲಿ ಯಾವ ಮಾನದಂಡಗಳನ್ನು ಇರಿಸುತ್ತಿರಲಿಲ್ಲ, ಆದರೆ ಅವನು ಮಾನದಂಡಗಳನ್ನು ಒಳ್ಳೆಯದಕ್ಕಾಗಿ ಇರಿಸಿದ್ದಾನೆ, ನನ್ನ ದೃಷ್ಟಿಯಲ್ಲಿ ಓರ್ವ ಮನುಷ್ಯ ನೈಜ್ಯವಾಗಿ ಹಾಗೂ ಸಂಪೂರ್ಣ ವಿಧೇಯನಾಗಿ ಅಲ್ಲಾಹನ ಆಸ್ತಾನದಲ್ಲಿ

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

لَا إِلٰهَ إِلَّا اللّٰهُ مُحَمَّدٌ رَّسُوْلُ اللّٰهِ

## ನಿಮ್ಮ ಮೇಲೆ ಒಂದು ಶ್ರೇಷ್ಠ ಹಾಗೂ ಅನುಗ್ರಹಪೂರ್ಣ ಮಾಸದ ನೆರಳಿದೆ

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಉಪವಾಸವನ್ನು ಕಡ್ಡಾಯವೆಂದು ಘೋಷಿಸಿದ್ದಾನೆ ಮತ್ತು ಸತ್ಯವಿಶ್ವಾಸಿಗಳಿಗೆ ಅದನ್ನು ಆಚರಿಸಲು ಪ್ರೋತ್ಸಾಹಿಸಿದ್ದಾನೆ. ಇದನ್ನು ನಾವು ಹಿಂದಿನ ಸಂಚಿಕೆಯಲ್ಲಿ ಉಲ್ಲೇಖಿಸಿದ್ದೇವೆ. ಪವಿತ್ರ ಹದೀಸುಗಳಲ್ಲಿ ಉಪವಾಸದ ಬಹಳಷ್ಟು ಮಹಿಮೆಗಳನ್ನು ವಿವರಿಸಲಾಗಿದೆ. ನಮ್ಮ ಆತ್ಮೀಯ ಒಡೆಯರಾದ ಸಯ್ಯದ್‌ನಾ ಹಝ್‌ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ಉಪವಾಸ ನಿರ್ವಹಿಸಲು ಬಹಳಷ್ಟು ತಾಕೀತು ಮಾಡಿದ್ದಾರೆ ಮತ್ತು ಕಾರಣವಿಲ್ಲದೆ ಉಪವಾಸ ಬಿಡುವುದನ್ನು ಹಾನಿಕಾರಕ ಎಂದು ಹೇಳಿದ್ದಾರೆ. ಉಪವಾಸದ ಮಹತ್ವ ಕುರಿತು ಕೆಲವು ಹದೀಸುಗಳು ಇಂತಿವೆ:

ಹಝ್‌ರತ್ ಪೈಗಂಬರ್(ಸ) ನುಡಿದರು:

**ಉಪವಾಸಿಗನು ಪಾಪಗಳಿಂದ, ಒರ್ವ ತಾಯಿ ಜನ್ಮ ನೀಡಿದ ಶಿಶುವಿನ ರೀತಿಯಲ್ಲಿ ಪಾರಾಗುತ್ತಾನೆ.**

ನಝಾರ್ ಬಿನ್ ಶೇಬಾನ್ ಹೇಳುತ್ತಾರೆ. ನಾನು ಅಬು ಸಲ್ಮಾ ಬಿನ್ ಅಬ್ದುರ್ ರಹ್ಮಾನ್ ಅವರನ್ನು ಕೇಳಿದೆ. ನೀವು ನಿಮ್ಮ ತಂದೆಯಿಂದ ಆಲಿಸಿದಂತಹ ಯಾವುದಾದರೂ ರಂಝಾನ್ ಮಾಸದ ಬಗ್ಗೆ ಹಝ್‌ರತ್ ಪೈಗಂಬರ್(ಸ) ರವರಿಂದ ಆಲಿಸಿದ ಮಾತುಗಳಿದ್ದರೆ ಹೇಳಿ. ಅಬು ಸಲ್ಮಾ ಬಿನ್ ಅಬ್ದುಲ್ ರಹ್ಮಾನ್ ಹೇಳಿದರು. ಹೌದು! ನನ್ನೊಡನೆ ನನ್ನ ತಂದೆಯರು ಹೇಳಿದರು. ರಸೂಲುಲ್ಲಾಹ್(ಸ) ಹೇಳಿದರು. ಅಲ್ಲಾಹನು ನಿಮಗೆ ಅಪವಾಸ ಅನುಷ್ಠಿಸಲು ಹೇಳುತ್ತಾನೆ. ಹಾಗೆ ಯಾರು ವಿಶ್ವಾಸಪೂರ್ಣವಾಗಿ ಇದರಲ್ಲಿ ಉಪವಾಸಗಳನ್ನು ನಿರ್ವಹಿಸುತ್ತಾನೋ, ಅವನು ಪಾಪಗಳಿಂದ ಓರ್ವ ತಾಯಿ ಜನ್ಮ ನೀಡಿದ ಶಿಶುವಿನ ರೀತಿಯಲ್ಲಿ ಪಾರಾಗುತ್ತಾನೆ ಎಂದರೆ ಅವನು ಸಂಪೂರ್ಣ ಮುಗ್ಧವಾಗುತ್ತಾನೆ. (ಸುನನ್ ನಿಸಾಯಿ ಕಿತಾಬುಸ್ ಸಿಯಾಮ್)

**ರಂಝಾನಿನಲ್ಲಿ ಸ್ವರ್ಗವನ್ನು ಶೃಂಗರಿಸಲಾಗುತ್ತದೆ.**

ಹಝ್‌ರತ್ ಅಬೂ ಮಸ್‌ಊದ್ ಗಫ್ಫಾರಿ(ರ) ಹೇಳುತ್ತಾರೆ. ನಾನು ರಂಝಾನ್ ಪ್ರಾರಂಭಗೊಂಡ ನಂತರ ಒಂದು ದಿನ ಹಝ್‌ರತ್ ಪೈಗಂಬರ್(ಸ) ಅವರು ಹೀಗೆ ಹೇಳುತ್ತಿರುವದನ್ನು ಕೇಳಿದೆ. ನನ್ನ ಜನಾಂಗಕ್ಕೆ ರಂಝಾನ್‌ನ ಮಹತ್ವ ಮನವರಿಕೆಯಾದರೆ, ಅವರು ವರ್ಷವಿಡೀ ರಂಝಾನ್ ಇರುತ್ತಿದ್ದರೆ ಒಳ್ಳೆಯದಿತ್ತು ಎಂದು ಆಶಿಸುತ್ತಿದ್ದರು. ಆಗ ಬನು ಖದಾಆದ ಓರ್ವನು ಹೇಳಿದನು. ನಬಿವರ್ಯರೇ ನಮಗೆ ರಂಝಾನಿನ ಮಹತ್ವವನ್ನು ತಿಳಿಸಿಕೊಡಿ. ಆಗ ಅವರು(ಸ) ಹೇಳಿದರು. ನಿಶ್ಚಯವಾಗಿಯೂ ರಂಝಾನ್ ಮಾಸಕೋಸ್ಕರ ವರ್ಷದ ಆರಂಭದಿಂದಲೇ ಆಕಾಶದಿಂದ ದೈವಿಕ ಗಾಳಿ ಬೀಸತೊಡಗುತ್ತದೆ. (ಅತ್ತರ್‌ಗ್ಗೀಬ್ ವತ್ತರ್‌ಹೀಬ್, ಕಿತಾಬುಸ್ಸೌಮ್, ಅತ್ತರ್‌ಗೀಬ್ ಫಿಸ್ಸಿಯಾಮ್ ರಮಝಾನ್ ಇಹ್ತಿಸಾಬನ್, ಹದೀಸ್-1498)

**ಉಪವಾಸಗಾರನಿಗೆ ಲಭಿಸುವ ಎರಡು ಸಂತೋಷಗಳು**

ಹಝ್‌ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ಹೇಳಿದರು. ಅಲ್ಲಾಹನು ಹೇಳುವನು. ಆದಮ ಪುತ್ರನ ಪ್ರತಿಯೊಂದು ಕರ್ಮ ಅವನ ವ್ಯಕ್ತಿಗತವಾಗಿರುತ್ತದೆ. ಉಪವಾಸಗಳಿಗೆ ಹೊರತುಪಡಿಸಿ, ಉಪವಾಸವು ನನಗೋಸ್ಕರ ನಿರ್ವಹಿಸಲಾಗುತ್ತದೆ. ಅದಕ್ಕೆ ನಾನೇ ಅದರ ಪ್ರತಿಫಲ ನೀಡುವೆನು. ಉಪವಾಸವು ಒಂದು ಗುರಾಣಿಯಾಗಿದೆ. ನಿಮ್ಮಲ್ಲಿ ಉಪವಾಸವಿರುವವರು ಕಾಮದವಿಷಯ ಮತ್ತು ಅಪಶಬ್ದಗಳನ್ನು ಬಳಸಬಾರದು. ಯಾರಾದರೂ ನಿಮ್ಮನ್ನು ಬೈದರೆ ಅಥವಾ ಜಗಳಕ್ಕೆ ಬಂದರೆ ಅವನಿಗೆ ಉತ್ತರವಾಗಿ ಕೇವಲ ಇಷ್ಟು ಹೇಳಬೇಕು. ನಾನು ಉಪವಾಸವಿದ್ದೇನೆ. ಅಲ್ಲಾಹನಾಣೆ. ಅವನ ಹಿಡಿತದಲ್ಲಿ ಮುಹಮ್ಮದನ ಜೀವವಿದೆ, ಉಪವಾಸಗಾರನ ಬಾಯಿಯ ವಾಸನೆ ಅಲ್ಲಾಹನ ಸಮೀಪ ಕಸ್ತೂರಿಗಿಂತಲೂ ಉತ್ತಮವಾಗಿರುತ್ತದೆ. ಉಪವಾಸಗಾರನಿಗೆ ಎರಡು ಸಂತೋಷಗಳಿವೆ, ಅದು ಅವನನ್ನು ಸಂತುಷ್ಟಗೊಳಿಸುತ್ತದೆ. ಒಂದು ಅವನು ಉಪವಾಸ ಬಿಡುವ ಸಮಯ ಅವನು ಸಂತೋಷವಾಗಿರುತ್ತಾನೆ. ಇನ್ನೊಂದು ಅವನು ತನ್ನ ಪ್ರಭುವಿನೊಡೆ ಭೇಟಿಯಾದಾಗ ಉಪವಾಸದ ಕಾರಣ ಅವನು ಸಂತುಷ್ಟನಾಗುವವನು. (ಬುಖಾರಿ ಕಿತಾಬುಸ್ ಸೌಮ್, ಬಾಬ್ ಹಲ್‌ಯಖೂಲು ಇನ್ನೀ ಸಾಯಿಮುನ್)

ಒಬ್ಬನು ರಂಝಾನ್‌ನಲ್ಲೂ ಸಹ ಕ್ಷಮಿಸಲ್ಪಡದಿದ್ದರೆ, ಅವನು ದೌರ್ಭಾಗ್ಯವಂತನೆ ಸರಿ. ಹಝ್‌ರತ್ ಕಅಬ್ ಬಿನ್ ಅಜ್ರ(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ಹೇಳಿದರು. ಪೀಠದ ಹತ್ತಿರ ಬನ್ನಿರಿ, ನಾವು ಬಂದೆವು. ಅವರು ಒಂದು ಹಂತವನ್ನು ಏರಿದಾಗ ಹೇಳಿದರು. ಆಮೀನ್. ಹಾಗೇ ಎರಡನೆಯ ಹಂತ ತಲುಪಿದಾಗ ಹೇಳಿದರು. ಆಮೀನ್ ಮತ್ತು ಅವರು ಮೂರನೆಯ ಹಂತ ಏರಿದಾಗಲೂ ಹೇಳಿದರು. ಆಮೀನ್. ಅವರು ಕೆಳಗಿಳಿದ ನಂತರ ನಾವು ಹೇಳಿದೆವು. ಓ ಅಲ್ಲಾಹನ ಸಂದೇಶವಾಹಕರೇ, ನಾವು ಹಿಂದೆಂದೂ ಕೇಳದಿದ್ದನ್ನು ನಾವು ಇಂದು ನಿಮ್ಮಿಂದ ಕೇಳಿದೆವು. ಪ್ರವಾದಿ (ಸ) ಹೇಳಿದರು. ಜಿಬ್ರಾಯಿಲ್ ನನ್ನ ಬಳಿ ಬಂದು ಹೇಳಿದರು. ಒಬ್ಬನ ಜೀವನದಲ್ಲಿ ರಂಝಾನ್ ಸಿಕ್ಕರೂ ಕ್ಷಮಾಪಣೆ ಸಿಗದವನು ದುರದೃಷ್ಟನು. ನಾನು ಹೇಳಿದೆ. ಆಮೀನ್. ನಾನು ಎರಡನೇ ಹಂತ ತಲುಪಿದಾಗ ಅವರು ಹೇಳಿದರು. ನಿಮ್ಮ ಹೆಸರಿನ ಮುಂದೆ ಯಾರು ನಿಮ್ಮನ್ನು ಉಲ್ಲೇಖಿಸಿ ದುರೂದ್ ಕಳುಹಿಸುವುದಿಲ್ಲವೋ ಅವನು ಅದೃಷ್ಟಹೀನನಾಗುತ್ತಾನೆ. ನಾನು ಹೇಳಿದೆ. ಆಮೀನ್. ನಾನು ಮೂರನೇ ಹಂತಕ್ಕೆ ಏರಿದಾಗ ಅವರು ಹೇಳಿದರು. ಯಾರದಾದರು ಜೀವಿತಾವಧಿಯಲ್ಲಿ ತಮ್ಮ ಪೋಷಕರು ಅಥವಾ ಅವರಲ್ಲಿ ಒಬ್ಬರು ವಯಸ್ಕರಾದರೆ ಮತ್ತು ಅವನು ಅವರ ಸೇವೆ, ಲಾಲನೆ-ಪಾಲನೆ ಮಾಡಿ ಸ್ವರ್ಗ ಪ್ರವೇಶಿಸಲಿಲ್ಲ ಎಂದಾದರೆ, ಅವನು ಸಹ ಭಾಗ್ಯಹೀನನು. ನಾನು ಹೇಳಿದೆ. ಆಮೀನ್. (ಅಲ್-ಹಾಕಿಮ್ ಫಿಲ್ ಮುಸ್ತದರಿಕ್ 170/4 ಅಕ್ರಖಮ್:7256)

**ರಂಝಾನಿನಲ್ಲಿ ಕ್ಷಮಿಸಲ್ಪಡದಿದ್ದರೆ ಮತ್ತೆ ಯಾವಾಗ ಕ್ಷಮಿಸಲ್ಪಡಬಹುದು.**

ಹಝ್‌ರತ್ ಅವಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ. ನಾವು ಹಝ್‌ರತ್ ಪೈಗಂಬರ್(ಸ) ಅವರಿಂದ ಕೇಳಿದೆ. ಅವರು ಹೇಳುತ್ತಿದ್ದರು. ರಂಝಾನ್ ಬಂದಿದೆ, ಆದುದರಿಂದ ಸ್ವರ್ಗದ ಬಾಗಿಲುಗಳನ್ನು ತೆರೆಯಲಾಗಿದೆ ಮತ್ತು ನರಕದ ಬಾಗಿಲುಗಳನ್ನು ಮುಚ್ಚಲಾಗಿದೆ ಮತ್ತು ಶೈತಾನುಗಳನ್ನು ಸೆರೆ ಹಿಡಿಯಲಾಗಿದೆ. ನಾಶಗೊಳ್ಳಲಿ ಆ ವ್ಯಕ್ತಿ, ಅವನು ರಂಝಾನ್ ಸಿಕ್ಕರೂ ಕ್ಷಮಿಸಲ್ಪಡಲಿಲ್ಲ. ರಂಝಾನ್‌ನಲ್ಲಿ ಕ್ಷಮಿಸಲ್ಪಡದಿದ್ದರೆ ಮತ್ಯಾವಾಗ ಕ್ಷಮಿಸಲ್ಪಡುವನು. (ಅತ್ತರ್‌ಗ್ಗೀಬ್ ವತ್ತರ್‌ಹೀಬ್, ಕಿತಾಬುಸ್ಸೌಮ್, ಹದೀಸ್-1495)

ಯೆಹ್ ಸಬರ್ ಕಾ ಮಹೀನ ಹೈ ಅಡರ ಸಬರ್ ಕಾ ಸವಾಬ್ ಜನ್ನತ್ ಹೈ

ಇಸ್ ಮಹೀನೆ ಮೇ ಮುಮಿನ್ ಕಾ ರಿಝ್ಕ್ ಬಡ್ಡಾದಿಯಾ ಜಾತಾ ಹೈ

(ಅಂದರೆ: ಇದು ತಾಳ್ಮೆಯ ತಿಂಗಳಾಗಿದೆ. ತಾಳ್ಮೆಯ ಪ್ರತಿಫಲವು ಸ್ವರ್ಗವಾಗಿದೆ, ಈ ತಿಂಗಳಿನಲ್ಲಿ ಸತ್ಯವಿಶ್ವಾಸಿಯ ಜೀವನಾಂಶವು ಹೆಚ್ಚಿಸಲಾಗುತ್ತದೆ)

ಹಝ್‌ರತ್ ಸಲ್ಮಾನ್(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ಶೌಬಾನಿನ ಅಂತಿಮ ದಿನದಂದು ನಮಗೆ ಬೋಧಿಸಿದರು. ಓ ಜನರೇ ನಿಮ್ಮ ಮೇಲೆ ಒಂದು ಶ್ರೇಷ್ಠ ಹಾಗೂ ಅನುಗ್ರಹಪೂರ್ಣ ತಿಂಗಳಿನ ನೆರಳು ಒದಗಿ ಬಂದಿದೆ. ಇದರಲ್ಲಿ ಒಂದು ರಾತ್ರಿಯಿದೆ. ಅದು ಸಾವಿರ ತಿಂಗಳುಗಳಿಗಿಂತಲೂ ಉತ್ತಮವಾಗಿದೆ. ಅಲ್ಲಾಹನು ಅದರಲ್ಲಿ ಉಪವಾಸಗಳನ್ನು ಕಡ್ಡಾಯಗೊಳಿಸಿದ್ದಾನೆ ಮತ್ತು ರಾತ್ರಿಗಳಲ್ಲಿ ನವಾಫಲ್ ನಮಾಝುಗಳನ್ನು ನಿರ್ವಹಿಸಲು ನಿರ್ದೇಶಿಸಿದ್ದಾನೆ. ಯಾವ ವ್ಯಕ್ತಿಯ ಅವನ ಸಾಮಿಪ್ಯ ಬಯಸಿ ಸತ್ಕರ್ಮಗೈದರೆ ಅವನಿಗೆ ಇತರ ತಿಂಗಳುಗಳಲ್ಲಿ ಒಂದು ಕರ್ತವ್ಯ ಪಾಲಿಸುವ ಸಮಾನ ಎಂದು ಪರಿಗಣಿಸಲಾಗುವುದು. ಮತ್ತು ಯಾವ ವ್ಯಕ್ತಿ ಒಂದು ಕರ್ತವ್ಯವನ್ನು ಪಾಲಿಸಿದರೆ ಅವರು ಇತರ ತಿಂಗಳುಗಳಲ್ಲಿ 70 ಕರ್ತವ್ಯಗಳನ್ನು ಪಾಲಿಸಿದಂತಾಗುವುದು. ಇದು ತಾಳ್ಮೆಯ ತಿಂಗಳಾಗಿದೆ ಮತ್ತು ತಾಳ್ಮೆಯ ಪ್ರತಿಫಲವು ಸ್ವರ್ಗವಾಗಿದೆ. ಇದು ಅನುಕಂಪದ ತಿಂಗಳಾಗಿದೆ. ಈ ತಿಂಗಳಿನಲ್ಲಿ ಸತ್ಯವಿಶ್ವಾಸಿಯ ಜೀವನಾಂಶವು ಹೆಚ್ಚಿಸಲಾಗುತ್ತದೆ. ಯಾವ ವ್ಯಕ್ತಿ ಉಪವಾಸಗಾರನೊಬ್ಬನಿಗೆ ಇಫ್ತಾರಿ (ಉಪವಾಸ ಬಿಡಿಸುವುದು) ಮಾಡಿಸಿದರೆ ಅವನ ಪಾಪಗಳು ಕ್ಷಮಿಸಲ್ಪಡುವುವು ಮತ್ತು ನರಕದಿಂದ ಮುಕ್ತಿ ನೀಡಲಾಗುವುದು. ಅವನಿಗೆ ಅವನ ಉಪವಾಸದಷ್ಟು ಪುಣ್ಯ ದೊರೆಯುವುದು. ಅದರಿಂದ ಅವನ ಪುಣ್ಯದಲ್ಲಿ ಯಾವ ಕಡಿತವು ಉಂಟಾಗುವುದಿಲ್ಲ. ಸಹಾಬರು ಹೇಳಿದರು. ಓ ಅಲ್ಲಾಹನ ಸಂದೇಶವಾಹಕರೇ! ನಮ್ಮಲ್ಲಿ ಎಲ್ಲರೂ ಇಫ್ತಾರಿ ಮಾಡಿಸುವ ಶಕ್ತಿ ಹೊಂದಿರುವುದಿಲ್ಲ. ರಸೂಲುಲ್ಲಾಹ್(ಸ) ಹೇಳಿದರು. ಈ ಪುಣ್ಯವು ಅಲ್ಲಾಹನು ಒಂದು ಖರ್ಜೂರ ತಿನ್ನಿಸುವವನಿಗೆ ಅಥವಾ ನೀರು ಕುಡಿಸುವವನಿಗೆ ಅಥವಾ ಹಾಲಿನ ಒಂದು ಗುಟ್ಟು ಕುಡಿಸಿ ಇಫ್ತಾರಿ ಮಾಡಿಸುವವನಿಗೂ ದಯಪಾಲಿಸುತ್ತಾನೆ. ಈ ತಿಂಗಳಿನ ಆರಂಭವು ಕರುಣೆಯಾಗಿದೆ, ಮಧ್ಯೆಯು ಕ್ಷಮೆಯಾಗಿದೆ ಮತ್ತು ಕೊನೆಯು ನರಕದಿಂದ ಮುಕ್ತಿಯಾಗಿದೆ. ಯಾವ ವ್ಯಕ್ತಿ ಈ ತಿಂಗಳಿನಲ್ಲಿ ತನ್ನ ಸೇವಕರಿಗೆ ರಿಯಾಯಿತಿ

*(ಪುಟ ಸಂಖೆ 11ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

"ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ಎಲ್ಲಾ ಪ್ರವಾದಿಗಳ ಮುದ್ರೆಯಾಗಿದ್ದಾರೆ ಮತ್ತು ಪವಿತ್ರ ಖುರ್‌ಆನ್ ಎಲ್ಲಾ ಗ್ರಂಥಗಳ ಮುದ್ರೆಯಾಗಿದೆ. ಈಗ, ಬೇರೆ ಯಾವುದೇ ಕಲಿಮ ಅಥವಾ ಯಾವುದೇ ಇತರ ನಮಾಝ್ [ವಿಧಾನ] ಇರುವಂತಿಲ್ಲ. ರಸೂಲುಲ್ಲಾಹ್(ಸ) ಅವರು ಹೇಳಿದ್ದನ್ನು ಅಥವಾ ಅವರು ಪ್ರದರ್ಶಿಸಿದ ಮತ್ತು ಪವಿತ್ರ ಖುರ್‌ಆನ್‌ನಲ್ಲಿ ಉಲ್ಲೇಖಿಸಿರುವ ಯಾವುದನ್ನಾದರೂ ತ್ಯಜಿಸುವ ಮೂಲಕ ಮೋಕ್ಷವನ್ನು ಪಡೆಯಲಾಗುವುದಿಲ್ಲ. ಇದನ್ನು ತ್ಯಜಿಸುವವನು ನರಕಕ್ಕೆ ಎಸೆಯಲ್ಪಡುವವನು. ಇದು ನಮ್ಮ ವಿಶ್ವಾಸ ಮತ್ತು ನಂಬಿಕೆಯಾಗಿದೆ." (ಹಝ್ರತ್ ಮಸೀಹ್ ಮೌಊದ್(ಅಲೈಹಿಸ್ಸಲಾಮ್))

ಮನುಷ್ಯನ ಸಹಜ ಶಕ್ತಿಯನ್ನು ಬದಲಾವಣೆ ಮಾಡುವುದು ಮತ್ತು ತೋಳವನ್ನು ಆಡನ್ನಾಗಿ ಮಾಡುವುದು ಧರ್ಮದ ಕೆಲಸವಲ್ಲ. ಬದಲಾಗಿ ಧರ್ಮದ ಗುರಿಯೇನೆಂದರೆ, ಮನುಷ್ಯನೊಳಗೆ ಸಹಜವಾಗಿ ಇರುವ ಶಕ್ತಿಗಳನ್ನು ಮತ್ತು ಸಾಮರ್ಥ್ಯಗಳನ್ನು ಸರಿಯಾದ ಸಮಯ ಮತ್ತು ಸ್ಥಳದಲ್ಲಿ ಉಪಯೋಗಿಸುವ ಮಾರ್ಗದರ್ಶನ ಮಾಡುವುದಾಗಿದೆ.

ಅಹ್ಮದೀಯರಲ್ಲದ ಮುಸ್ಲಿಮರಲ್ಲಿ ಬಹಳಷ್ಟು ನವೀನಾಚಾರಗಳು ಸೃಷ್ಟಿಯಾಗಿವೆ ಆದರೆ ಕೆಲವು ಅಹ್ಮದಿಯರು ಸಹ ಇದರಿಂದ ಪ್ರಭಾವಿತರಾಗಿದ್ದಾರೆ ಆದ್ದರಿಂದ ನಾವು ನವೀನಾಚಾರಗಳಿಂದ ರಕ್ಷಣೆ ಪಡೆಯಬೇಕು. ಪವಿತ್ರ ಖುರ್‌ಆನಿನ ತರ್ಜುಮೆ ಮತ್ತು ವ್ಯಾಖ್ಯಾನ ಓದುವುದರ ಕಡೆಗೆ ಹೆಚ್ಚಿನ ಗಮನವಹಿಸಬೇಕು.

**ಮುಸ್ಲಿಮರ ಅಭಿವೃದ್ಧಿಯೂ ಪವಿತ್ರ ಖುರ್‌ಆನ್‌ನೊಂದಿಗೆ ಷರತ್ತು ಬದ್ಧವಾಗಿದೆ**

ಪವಿತ್ರ ಖುರ್‌ಆನ್ ಆಭರಣಗಳ ಚೀಲವಾಗಿದ್ದು, ಜನರಿಗೆ ಇದರ ಬಗ್ಗೆ ಅರಿವಿಲ್ಲ

ಪವಿತ್ರ ಖುರ್‌ಆನ್‌ನೊಂದಿಗೆ ಬೇರೆ ಯಾವುದೇ ಪುಸ್ತಕವು ಸ್ಪರ್ಧಿಸಲು ಸಾಧ್ಯವಿಲ್ಲ ಮತ್ತು ಪವಿತ್ರ ಖುರ್‌ಆನ್ ಎಲ್ಲಾ ಪುಸ್ತಕಗಳಿಗಿಂತ ಮೇಲಿರುವಂತೆ, ಪವಿತ್ರ ಪ್ರವಾದಿ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಸ್ಥಾನವೂ ಎಲ್ಲಾ ಪ್ರವಾದಿಗಳಿಗಿಂತಲೂ ಉನ್ನತ ಮಟ್ಟದಲ್ಲಿದೆ

ಪವಿತ್ರ ಖುರ್‌ಆನ್ ಅನ್ನು ಸಂಪೂರ್ಣವಾಗಿ ಅನುಸರಿಸಿ ಅದರ ಬೋಧನೆಗಳ ಪ್ರಕರ ವಿಧೇಯತೆಯನ್ನು ತೋರಿಸಿದರೆ ಸರ್ವಶಕ್ತನಾದ ಅಲ್ಲಾಹನನ್ನು ಪಡೆಯಬಹುದು.

**ಪವಿತ್ರ ಖುರ್‌ಆನ್ ಬುದ್ಧಿವಂತಿಕೆ ಮತ್ತು ಜ್ಞಾನದ ನಿಧಿಯಾಗಿದೆ.**

"ಖಂಡಿತವಾಗಿಯೂ, ನಾವೇ ಈ ಉಪದೇಶವನ್ನು ಕಳುಹಿಸಿದ್ದೇವೆ ಮತ್ತು ಖಂಡಿತವಾಗಿಯೂ ನಾವು ಅದರ ರಕ್ಷಕರಾಗುತ್ತೇವೆ. (ಪವಿತ್ರ ಖುರ್‌ಆನ್)

ಪವಿತ್ರ ಕುರ್‌ಆನ್‌ನ ಉದ್ದೇಶವು ಅನಾಗರಿಕರನ್ನು ಮನುಷ್ಯರನ್ನಾಗಿ ಮಾಡುವುದು ಮತ್ತು ನಂತರ ಅವರನ್ನು ನೈತಿಕ ಗುಣಗಳಿಂದ ಸಜ್ಜುಗೊಳಿಸುವುದು ಮತ್ತು ಅಂತಿಮವಾಗಿ ಅವರನ್ನು ದೈವಿಕ ವ್ಯಕ್ತಿಗಳ ಮಟ್ಟಕ್ಕೆ ಏರಿಸುವುದಾಗಿದೆ. (ಹಝ್ರತ್ ಮಸೀಹ್ ಮೌಊದ್(ಅಲೈಹಿಸ್ಸಲಾಮ್))

ರಮಝಾನ್ ಸಹ ಈಗ ಆರಂಭವಾಗಲಿದೆ. ಈ ತಿಂಗಳಲ್ಲಿ ವಿಶೇಷವಾಗಿ ಪವಿತ್ರ ಖುರ್‌ಆನ್ ಓದುವ ಮತ್ತು ಮನವರಿಕೆ ಮಾಡುವ ಕಡೆಗೆ ಗಮನ ನೀಡುವುದರೊಂದಿಗೆ ದುಆದ ಕಡೆಗೆ ವಿಶೇಷವಾದ ಗಮನ ನೀಡಿರಿ.

ಪಾಕಿಸ್ತಾನ, ಬುರ್ಕಿನಾಫಾಸೋ ಮತ್ತು ಬಾಂಗ್ಲಾದೇಶದ ಅಹ್ಮದಿಯರಿಗಾಗಿ ದುಆ ಮಾಡಲು ಪುನಃ ಹೇಳಿದರು.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **17-03-2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ـ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ

إِيَّاكَ نَعْبُدُ وَإِيَّاكَ نَسْتَعِيْنُ ـ اِهْدِنَا الصِّرَاطَ الْمُسْتَقِيْمَ ـ

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّالِّيْنَ ـ

ಕಳೆದ ಕೆಲವು ವಾರಗಳಿಂದ ಪವಿತ್ರ ಖುರ್‌ಆನಿನ ಸ್ಥಾನಮಾನ ಮತ್ತು ಸೌಂದರ್ಯಗಳ ಬಗ್ಗೆ ವಿವರಿಸಲಾಗುತ್ತಿದೆ. ಪವಿತ್ರ ಖುರ್‌ಆನಿನ ಪ್ರಕಾರ ಧರ್ಮದ ಕೆಲಸವೇನು ಮತ್ತು ಮನುಷ್ಯನ ಶಕ್ತಿಯ ಮೇಲೆ ಅದರ ನಿಯಂತ್ರಣ ಮತ್ತು ಸ್ವಾಧೀನ ಏನಾಗಿದೆ ಮತ್ತು ಏನಾಗಿರಬೇಕು? ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಇಂಜೀಲ್ ಇದಕ್ಕೆ ಉತ್ತರ ನೀಡುವುದಿಲ್ಲ. ಏಕೆಂದರೆ ಇಂಜೀಲ್ ವಿವೇಕದ ಮಾರ್ಗಗಳಿಂದ ಬಲು ದೂರವಿದೆ. ಆದರೆ ಪವಿತ್ರ ಖುರ್‌ಆನ್ ಬಹಳ ವಿಶದವಾಗಿ ಪದೇ ಪದೇ ಈ ಸಮಸ್ಯೆಗಳನ್ನು ಬಗೆಹರಿಸುತ್ತದೆ. ಎಂದರೆ, ಮನುಷ್ಯನ ಸಹಜ ಶಕ್ತಿಯನ್ನು ಬದಲಾವಣೆ ಮಾಡುವುದು ಮತ್ತು ತೋಳವನ್ನು ಆಡನ್ನಾಗಿ ಮಾಡುವುದು ಧರ್ಮದ ಕೆಲಸವಲ್ಲ. ಅದು ಶಕ್ತಿಶಾಲಿಯನ್ನು ದುರ್ಬಲಗೊಳಿಸುವುದಿಲ್ಲ. ಬದಲಾಗಿ ಧರ್ಮದ ಗುರಿಯೇನೆಂದರೆ, ಮನುಷ್ಯನೊಳಗೆ ಸಹಜವಾಗಿ ಇರುವ ಶಕ್ತಿಗಳನ್ನು ಮತ್ತು ಸಾಮರ್ಥ್ಯಗಳನ್ನು ಸರಿಯಾದ ಸಮಯ ಮತ್ತು ಸ್ಥಳದಲ್ಲಿ ಉಪಯೋಗಿಸುವ ಮಾರ್ಗದರ್ಶನ ಮಾಡುವುದಾಗಿದೆ. ಸಹಜ ಶಕ್ತಿಯನ್ನು ಬದಲಾಯಿಸಲು ಧರ್ಮಕ್ಕೆ ಅಧಿಕಾರವಿಲ್ಲ. ಬದಲಾಗಿ ಅದನ್ನು ಸಂದರ್ಭಾನುಸಾರ ಉಪಯೋಗಿಸಲು ನಿರ್ದೇಶಿಸುವ ಹಕ್ಕಿದೆ. ಧರ್ಮವು ಕೇವಲ ಒಂದು ಶಕ್ತಿಯ ಮೇಲೆ ಒತ್ತು ಕೊಡಬಾರದು. ಬದಲಾಗಿ ಎಲ್ಲ ಶಕ್ತಿಗಳನ್ನು ಉಪಯೋಗಿಸಲು ಉಪದೇಶಿಸಬೇಕು. ಯಥಾರ್ಥ ಉದ್ದೇಶ ಸುಧಾರಣೆಯಾಗಿದೆ. ಈ ಉದ್ದೇಶ ಯಾವ ರೀತಿಯಲ್ಲಿ ಈಡೇರುವುದಾದರೂ ಅದರ ಪ್ರಯತ್ನ ಮಾಡಬೇಕು. ಅವರು ಕರುಣೆ ಅಥವಾ ಕ್ಷಮೆಗೆ ಒತ್ತು ನೀಡಬಾರದು, ಬದಲಿಗೆ ಎಲ್ಲಾ ಶಕ್ತಿಗಳ ಬಳಕೆಗಾಗಿ ಉಪದೇಶಿಸಬೇಕು ಎಂದು ಅವರು ಹೇಳುತ್ತಾರೆ, ಏಕೆಂದರೆ ಮಾನವ ಶಕ್ತಿಗಳು ಯಾವುದೂ ಕೆಟ್ಟದ್ದಲ್ಲ, ಆದರೆ ಅತಿಹೆಚ್ಚು ಮಾಡುವುದು ಅಥವಾ ತೀರ ಕಡಿಮೆ ಮಾಡುವುದು ಮತ್ತು ತಪ್ಪು ಬಳಕೆ ಕೆಟ್ಟದ್ದು ಮತ್ತು ಖಂಡನೀಯ ವ್ಯಕ್ತಿ ಮಾತ್ರ ನೈಸರ್ಗಿಕ ಶಕ್ತಿಯ ಕಾರಣದಿಂದ ದೂಷಿಸಲಾಗದು ಬದಲಿಗೆ ಅದರ ದುರುಪಯೋಗದ ಕಾರಣದಿಂದಾಗಿ ದೂಷಿಸಲಾಗುವುದು." (ಸಿರಾಜುದ್ದೀನ್ ಈಸಾಯಿಕೆ ಚಾರ್ ಸವಾಲೋಂ ಕ ಜವಾಬ್, ರೂಹಾನಿ ಖಝಾಇನ್, ಸಂಪುಟ-12, ಪುಟ-340-341)

ಇದಕ್ಕೊಂದು ಚಿಕ್ಕ ಉದಾಹರಣೆಯೆಂದರೆ, ಓರ್ವ ದೈಹಿಕವಾಗಿ ಬಲಶಾಲಿ ಇರುವ ಮನುಷ್ಯ ತನ್ನ ಶಕ್ತಿ ತೋರಿಸಲು ದೌರ್ಜನ್ಯವನ್ನು ಮುಂದುವರೆಸಿದರೆ ಅಥವಾ ಅವನು ಅಧಿಕಾರದಲ್ಲಿದ್ದರೆ ದೌರ್ಜನ್ಯವನ್ನು ಮುಂದುವರೆಸಿದರೆ ಅವನು ಇತರರಿಗೆ ದಯೆ ತೋರದಿದ್ದರೆ. ಸಂದರ್ಭಕ್ಕೆ ತಕ್ಕಂತೆ ಶಕ್ತಿಯನ್ನು ವ್ಯಕ್ತಪಡಿಸದೆ ತನ್ನ ಶ್ರೇಷ್ಠತೆಯನ್ನು ಸಾಬೀತುಪಡಿಸುವುದು ಮತ್ತು ಭಯವನ್ನು ಸ್ಥಾಪಿಸುವುದು ಉದ್ದೇಶವಾಗಿದ್ದರೆ, ಅಂತಹ ವ್ಯಕ್ತಿಯನ್ನು ಕೆಟ್ಟವನು ಎಂದು ಕರೆಸಲ್ಪಡುತ್ತಾನೆ. ಆತನ ಸಾಮರ್ಥ್ಯಗಳು ಕೆಟ್ಟದ್ದಲ್ಲ ಆದರೆ ಅವನ ಬಳಕೆ ಕೆಟ್ಟದು, ಅವನ ಕಾರ್ಯಗಳು ಕೆಟ್ಟದು.

ಹಝ಼್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಮುಸ್ಲಿಮರು ಪವಿತ್ರ ಖುರ್‌ಆನನ್ನು ಕಿಂಚಿತ್ತೂ ಮನವರಿಕೆ ಮಾಡಿಲ್ಲವೆಂಬುದು ನಿಶ್ಚಯವಾಗಿಯೂ ಸತ್ಯ ಸಂಗತಿಯಾಗಿದೆ. ಆದರೆ ಈಗ ಪವಿತ್ರ ಖುರ್‌ಆನಿನ ಸರಿಯಾದ ಅರ್ಥವನ್ನು ಸ್ಪಷ್ಟಪಡಿಸಲು ಅಲ್ಲಾಹನು ಉದ್ದೇಶಿಸಿರುವನು. ಅಲ್ಲಾಹನು ನನ್ನನ್ನು ಅದಕ್ಕಾಗಿಯೇ ನಿಯೋಜಿಸಿದ್ದಾನೆ. ನಾನು ಅವನ ದಿವ್ಯವಾಣಿಗಳ ಮೂಲಕ ಪವಿತ್ರ ಖುರ್‌ಆನನ್ನು ಮನವರಿಕೆ ಮಾಡುತ್ತೇನೆ. ಪವಿತ್ರ ಖುರ್‌ಆನಿನ ಅಧ್ಯಾಪನೆಗಳು ಆಕ್ಷೇಪಣೀಯವಲ್ಲ. ಅದು ಎಷ್ಟು ವಿವೇಕಪೂರ್ಣವಾಗಿದೆ ಎಂದರೆ, ಯಾವನೇ ತತ್ವಜ್ಞಾನಿಗೂ ಅದರ ಮೇಲೆ ಆಕ್ಷೇಪವೆತ್ತಲು ಸಂದರ್ಭ ಸಿಗುವುದಿಲ್ಲ. (ಮಲ್‌ಫ಼ೂಝಾತ್, ಸಂಪುಟ–6, ಪುಟ–167, 1984)

ಪವಿತ್ರ ಖುರ್‌ಆನಿನ ಮಹಿಮೆಯ ಬಗ್ಗೆ ವಿವರಿಸುತ್ತಾ ಹಝ಼್ರತ್ ಮಸೀಹ್ ಮೌಊದ್(ಅ) ಜಮಾಅತನ್ನು ಹೀಗೆ ಉಪದೇಶಿಸುತ್ತಾರೆ: ಪವಿತ್ರ ಖುರ್‌ಆನ್ ಬಗ್ಗೆ ಚಿಂತಿಸಿರಿ. ಅದರಲ್ಲಿ ಒಳಿತು ಮತ್ತು ಕೆಡುಕಿನ ವಿವರಣೆಯಿದೆ ಹಾಗೂ ಭವಿಷ್ಯವಾಣಿಗಳು ಇವೆ. ಆಕ್ಷೇಪಿಸಲು ಸಾಧ್ಯವಿಲ್ಲದ ಧರ್ಮವನ್ನು ಅದು ಮುಂದಿರಿಸುತ್ತದೆ. ಅದರ ತಾಜಾ ಅನುಗ್ರಹಗಳು ಮತ್ತು ಫಲಗಳು ಲಭಿಸುತ್ತಿರುತ್ತದೆ. ಅಲ್ಲಾಹನು ಪ್ರತಿಯೊಂದು ರೋಗದ ಚಿಕಿತ್ಸೆ ಅದರಲ್ಲಿ ಹೇಳಿದ್ದಾನೆ ಮತ್ತು ಎಲ್ಲ ಶಕ್ತಿಗಳ ಪೋಷಣೆಯನ್ನು ಅದರಲ್ಲಿ ಮಾಡಿದ್ದಾನೆ ಎಂಬ ಹಿರಿಮೆ ಪವಿತ್ರ ಖುರ್‌ಆನಿಗೆ ಮಾತ್ರವಿರುವುದಾಗಿದೆ. ಅದರಲ್ಲಿ ತಿಳಿಸಲಾದ ಕೆಡುಕುಗಳನ್ನು ದೂರ ಮಾಡುವ ವಿಧಾನವನ್ನು ಕೂಡ ಹೇಳಿಕೊಟ್ಟಿದ್ದಾನೆ. ಆದ್ದರಿಂದ ಪವಿತ್ರ ಖುರ್‌ಆನಿನ ಪಾರಾಯಣ ಮಾಡುತ್ತಾ ಇರಿ, ದುಆ ಮಾಡುತ್ತಾ ಇರಿ ಮತ್ತು ತಮ್ಮ ನಡತೆಗಳನ್ನು ಅದರ ಬೋಧನೆಗಳ ಪ್ರಕಾರ ಮಾಡಲು ಪ್ರಯತ್ನಿಸಿರಿ.

(ಮಲ್‌ಫೂಝಾತ್, ಸಂಪುಟ–9, ಪುಟ–122, 1984)

ಪವಿತ್ರ ಖುರ್‌ಆನಿನ ಬಗ್ಗೆ ಚಿಂತಿಸುವ ಕಡೆಗೆ ಗಮನ ಸೆಳೆಯುತ್ತಾ ಹಝ಼್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಸಂಪ್ರದಾಯ ಮತ್ತು ನವೀನಾಚಾರಗಳಿಂದ ದೂರವಿರುವುದು ಉತ್ತಮ. ಇದರಿಂದ ಮೆಲ್ಲಮೆಲ್ಲನೆ ಶರೀಅತಿನ ಸ್ವಾಧೀನ ಶುರುವಾಗುತ್ತದೆ. ಜಪಗಳಲ್ಲಿ ಕಳೆಯುವ ಸಮಯವನ್ನು ಪವಿತ್ರ ಖುರ್‌ಆನಿನ ಬಗ್ಗೆ ಚಿಂತಿಸುವುದರಲ್ಲಿ ಖರ್ಚು ಮಾಡುವುದು ಒಳಿತು. (ಮಲ್‌ಫೂಝಾತ್, ಸಂಪುಟ–6, ಪುಟ–266, 1984)

ಜನರು ಪ್ರಯತ್ನಿಸುವುದೇನೆಂದರೆ ಯಾವುದಾದರು ಜಪ ಹೇಳಿದರೆ ಸಾಕು ಅಥವಾ ಯಾವುದಾದರು ಒಂದು ಸಣ್ಣ ವಿಷಯ ತಿಳಿಸಿದರೆ ಸಾಕು ಅದನ್ನು ಅನುಸರಿಸಿದರೆ ಸಾಕು ನಮಗೆ ಅಷ್ಟೇ ಸಾಕು. ಹಝ್‌ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ ಪವಿತ್ರ ಖುರ್‌ಆನ್‌ನ ಧ್ಯಾನದಲ್ಲಿ ಸಮಯ ಕಳೆಯಿರಿ. ಕೆಲವರು ತಮ್ಮ ಸಮಯವನ್ನು ದಾನದಲ್ಲಿ ಮಾತ್ರ ಕಳೆಯುತ್ತಾರೆ. ಮತ್ತು ಕೆಲವು ಜನರು ಜಪ ಮಾಡುವುದರಲ್ಲಿ (ವಜಾಎಫ್) ಮತ್ತು ಝಿಕ್ರ್ ಅರ್ಥವನ್ನು ಅರ್ಥಮಾಡಿಕೊಳ್ಳುವುದಿಲ್ಲ ಮತ್ತು ಇದು ಅವರ ಆಧ್ಯಾತ್ಮಿಕ ಸುಧಾರಣೆಯ ಏಕೈಕ ಸಾಧನವಾಗಿದೆ ಎಂದು ಭಾವಿಸುತ್ತಾರೆ. ಹಝ್‌ರತ್ ಮಸೀಹ್ ಮೌಊದ್(ಅ) ಹೇಳಿದರು ಅದರ ಬದಲು ಈ ಸಮಯವನ್ನು ಪವಿತ್ರ ಖುರ್‌ಆನ್‌ನ ಧ್ಯಾನದಲ್ಲಿ ಕಳೆಯುವುದು ಉತ್ತಮವಾಗಿದೆ. ಆಧ್ಯಾತ್ಮಿಕ ಪ್ರಗತಿಯನ್ನು ಇದರಿಂದಲೇ ಸಾಧಿಸಬಹುದು. ಅಹ್ಮದೀಯರಲ್ಲದ ಮುಸ್ಲಿಮರಲ್ಲಿ ಬಹಳಷ್ಟು ನವೀನಾಚಾರಗಳು ಸೃಷ್ಟಿಯಾಗಿವೆ ಆದರೆ ಕೆಲವು ಅಹ್ಮದಿಯರು ಸಹ ಇದರಿಂದ ಪ್ರಭಾವಿತರಾಗಿದ್ದಾರೆ ಆದ್ದರಿಂದ ನಾವು ನವೀನಾಚಾರಗಳಿಂದ ರಕ್ಷಣೆ ಪಡೆಯಬೇಕು. ಪವಿತ್ರ ಖುರ್‌ಆನಿನ ತರ್ಜುಮೆ ಮತ್ತು ವ್ಯಾಖ್ಯಾನ ಓದುವುದರ ಕಡೆಗೆ ಹೆಚ್ಚಿನ ಗಮನವಹಿಸಬೇಕು. ಮುಂದಿನ ವಾರ ರಮಝ಼ಾನ್ ಕೂಡ ಶುರುವಾಗಲಿದೆ. ಆದ್ದರಿಂದ ಈ ರಮಝ಼ಾನಿನಲ್ಲಿ ವಿಶೇಷವಾಗಿ ಪವಿತ್ರ ಖುರ್‌ಆನ್ ಓದಲು, ಓದಿಸಲು ಮತ್ತು ಮನವರಿಕೆ ಮಾಡಲು ಪ್ರಯತ್ನಿಸಬೇಕು.

ಹಝ಼್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹೃದಯದ ಕಠೋರತೆಯನ್ನು ಮೃದುಗೊಳಿಸಲು ಪವಿತ್ರ ಖುರ್‌ಆನನ್ನೇ ಪದೇ ಪದೇ ಓದಿರಿ. ದುಆ ಇರುವ ಎಡೆಗಳಲ್ಲಿ, ಅದೇ ದೈವಿಕ ಕೃಪೆ ನನಗೂ ಲಭಿಸಲಿ ಎಂದು ಸತ್ಯವಿಶ್ವಾಸಿಯ ಹೃದಯ ಸಹ ಬಯಸುತ್ತದೆ. ಪವಿತ್ರ ಖುರ್‌ಆನಿನ ಉದಾಹರಣೆ ಒಂದು ತೋಟದ ಹಾಗೆ ಆಗಿರುತ್ತದೆ. ಒಂದು ಸ್ಥಳದಿಂದ ಒಂದು ವಿಧದ ಹೂವನ್ನು ... ಮತ್ತೆ ಮುಂದಕ್ಕೆ ಹೋಗಿ ಬೇರೆ ವಿಧದ ಹೂವನ್ನು ತೆಗೆಯಲಾಗುತ್ತದೆ. ಒಟ್ಟಿನಲ್ಲಿ, ಪ್ರತಿಯೊಂದು ಸ್ಥಳದಿಂದ ಸ್ಥಿತಿಗೆ ಅನುಸಾರವಾದ ಪ್ರಯೋಜನವನ್ನು ಪಡೆಯಬೇಕು. (ಮಲ್‌ಫೂಝಾತ್, ಸಂಪುಟ–6, ಪುಟ–266, 1984) ಪವಿತ್ರ ಖುರ್‌ಆನಿನ ಆಜ್ಞೆಗಳನ್ನು ಪಾಲಿಸುವಾಗ ಮನುಷ್ಯನ ಆಧ್ಯಾತ್ಮಿಕ ಅಭಿವೃದ್ಧಿಯಾಗುತ್ತದೆ. ಅಲ್ಲಾಹನು ನೀಡಿದ ಆದೇಶಗಳನ್ನು ಪಾಲಿಸಬೇಕು ಮತ್ತು ನಿಷೇಧಿಸಿದ ಸಂಗತಿಗಳಿಂದ ತಡೆದು ನಿಲ್ಲಲು ಪ್ರಯತ್ನಿಸಬೇಕು. ಮನುಷ್ಯನು ಈ ತೋಟದಿಂದ ಆರಿಸುವ ಹೂಗಳು ಇವೇ ಆಗಿವೆ.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು, ಕೆಲವರು ತಮ್ಮ ಜ್ಞಾನದ ಪ್ರತಿಪಾದನೆಯಲ್ಲಿ ಎಲ್ಲಿಯವರೆಗೆ ಹೋಗಿದ್ದಾರೆ ಎಂದರೆ ಉದಾಹರಣೆಗೆ, ಪವಿತ್ರ ಖುರ್‌ಆನ್‌ನ ಕೆಲವು ಸೂರಾಗಳು, ಉದಾಹರಣೆಗೆ, ಅವರು (ಅ) ಸೂರಾ ಯಾಸಿನ್‌ನ ಉದಾಹರಣೆಯನ್ನು ನೀಡಿದರು, ಅವರು ಅದರ ಬಗ್ಗೆ ಹೇಳುತ್ತಾರೆ ನೀವು ಅದನ್ನು ಇಂತಹ ಮತ್ತು ಇಂತಹ ರೀತಿಯಲ್ಲಿ ಪಠಿಸಿರಿ, ನೀವು ಅನುಗ್ರಹಿಸಲ್ಪಡುತ್ತೀರಿ, ಇಲ್ಲದಿದ್ದರೆ ಅದು ಸಂಭವಿಸುವುದಿಲ್ಲ. (ಮಲ್‌ಫೂಝಾತ್, ಸಂಪುಟ–6, ಪುಟ–266, 1984) ಈ ವಿಷಯಗಳು ದೈವತ್ವದ ವಾದಗಳಾಗಿವೆ. ಆದ್ದರಿಂದ ನಾವು ವಿಶೇಷವಾಗಿ ಅಂತಹ ವಿಷಯಗಳನ್ನು ತಪ್ಪಿಸಬೇಕು. ಪವಿತ್ರ ಖುರ್‌ಆನ್‌ನಿಂದ ತಪ್ಪಿಸಿಕೊಳ್ಳುವುದು ಎರಡು ರೀತಿಯಲ್ಲಿವೆ ಎಂದು ಹೇಳುತ್ತಾರೆ ಅಂದರೆ ಒಂದು (ಎರಾಝೆ ಸೂರಿ) ದೃಶ್ಯ ತಪ್ಪಿಸುವಿಕೆ ಮತ್ತು ಇನ್ನೊಂದು ಶಬ್ದಾರ್ಥದ ತಪ್ಪಿಸುವಿಕೆ ಹಾಗಾದರೆ ಇದರ ಅರ್ಥವೇನು? ತಪ್ಪಿಸಿಕೊಳ್ಳುವುದು ಎಂದರೆ ಅದನ್ನು ಕಾರ್ಯನಿರ್ವಹಿಸುವುದಿಲ್ಲ ಅಂದರೆ ಮನುಷ್ಯನು ಸಾಂಕೇತಿಕವಾಗಿ ಅನುಸರಿಸುವುದಿಲ್ಲ ಅಥವಾ ಅರ್ಥಪೂರ್ಣವಾಗಿ ಅನುಸರಿಸುವುದಿಲ್ಲ.

ಪವಿತ್ರ ಖುರ್‌ಆನ್‌ನಿಂದ ಎರಡು ರೀತಿಯ ವ್ಯಾಖ್ಯಾನಗಳಿವೆ ಎಂದು ಅವರು(ಅ) ವಿವರಿಸಿದರು. ಒಂದು ದೃಶ್ಯ ಮತ್ತೊಂದು ಶಬ್ದಾರ್ಥ. ದೃಶ್ಯ ಅಂದರೆ ದೈವ ವಾಕ್ಯವನ್ನು ಎಂದಿಗೂ ಪಠಿಸಬಾರದು. ಉದಾಹರಣೆಗೆ ಅನೇಕ ಜನರು ಮುಸ್ಲಿಮರು ಎಂದು ಕರೆಸಿಕೊಳ್ಳುತ್ತಾರೆ ಆದರೆ ಅವರು ಪವಿತ್ರ ಖುರ್‌ಆನ್‌ನ ಒಂದು ವಾಕ್ಯದಿಂದ ಅಜಾಗೃತರಾಗಿರುತ್ತಾರೆ. ಮತ್ತೊಂದು "ಮಾನವಿ" ಅಂದರೆ ಶಬ್ದಾರ್ಥ "ಅಂದರೆ, ಅವರು ಅದನ್ನು ಪಠಿಸುತ್ತಾರೆ, ಆದರೆ ಅದರ ಅನುಗ್ರಹಗಳನ್ನು ಮತ್ತು ಕರುಣೆಯನ್ನು ನಂಬುವುದಿಲ್ಲ. ಹಾಗಾಗಿ ಈ ಎರಡರಲ್ಲಿ ಯಾವುದಾದರೂ ಲಕ್ಷಣಗಳು ಕಂಡುಬಂದರೆ, ಅದನ್ನು ತಪ್ಪಿಸಬೇಕು." ಹಝ್‌ರತ್ ಮಸೀಹ್ ಮೌಊದ್(ಅ) ಹೇಳಿದರು "ಇಮಾಮ್ ಜಾಫರ್(ರ) ಅವರ ಒಂದು ಹೇಳಿಕೆ ಇದೆ ವಲ್ಲಾಹು ಅಲ್‌ಲಮು ಎಲ್ಲಿಯ ವರೆಗೆ ಸರಿಯಾಗಿದೆ ಅಂದರೆ ನಾನು ಒಲ್ಲಿಯವರೆಗೆ ಕಲಾಮ್ (ಸೈವವಾಣಿಯನ್ನು) ಅನ್ನು ಪಠಿಸುತ್ತೇನೆ ಅದರೊಂದಿಗೆಯೇ ದೈವವಾಣಿಯೂ ಅವತರಿಸಲು ಪ್ರಾರಂಭಿಸುತ್ತದೆ ಆದರೆ ಅವರ ಈ ಹೇಳಿಕೆಯು ಸಮಂಜಸವಾಗಿದೆ ಎಂದು ತೋರುತ್ತದೆ. ಹಝ್‌ರತ್ ಮಸೀಹ್ ಮೌಊದ್(ಅ) ಹೇಳಿದರು– ಇದು ಸರಿಯೋ ಇಲ್ಲವೋ ಎಂಬುದು ಅಲ್ಲಾಹನಿಗೆ ಚೆನ್ನಾಗಿ ತಿಳಿದಿದೆ, ಆದರೆ ಇದು ಸಮಂಜಸವಾಗಿದೆ. ಅಂದರೆ, ಅವರು ಹೇಳಿದ್ದಾರೆಯೊ ಅಥವಾ ಇಲ್ಲವೊ ಇದು ತಿಳಿದಿಲ್ಲ, ಆದರೆ ಇದು ಸಮಂಜಸವಾಗಿದೆ. "ಏಕೆಂದರೆ ಒಂದು ಲಿಂಗದ ವಸ್ತುವು ಇನ್ನೊಂದು ವಸ್ತುವನ್ನು ಆಕರ್ಷಿಸುತ್ತದೆ. ಪ್ರಸ್ತುತ ಕಾಲದಲ್ಲಿ ಜನರು ನೂರಾರು ಅಡಿಟಿಪ್ಪಣಿಗಳನ್ನು ಬರೆದಿದ್ದಾರೆ. ಶಿಯಾಗಳು ಬೇರೆ, ಸುನ್ನಿಗಳು ಬೇರೆ." ಒಂದು ಘಟನೆಯನ್ನು ವಿವರಿಸುತ್ತಾ, ಹುಝೂರ್(ಅ) ಹೇಳಿದರು: "ಒಮ್ಮೆ ಶಿಯಾ ನನ್ನ ತಂದೆಗೆ ಹೇಳಿದರು, ನಾನು ಒಂದು ವಾಕ್ಯವನ್ನು ಹೇಳುತ್ತೇನೆ, ಅದನ್ನು ಪಠಿಸಿಕೊಂಡರೆ, ತದನಂತರ ಶುದ್ಧೀಕರಣ ಮತ್ತು ವಝೂ ಮಾಡುವ ಅವಶ್ಯಕತೆ ಇಲ್ಲ." ಹೀಗೆ ಆ ಒಂದು ವಾಕ್ಯವೇ ಸಾಕಾಗುವುದು. ಅದು ವಝೂ ಆಗಿದೆ ಅತ್ತು ಅದು ಶುದ್ಧತೆಯಾಗಿದೆ. ಇಸ್ಲಾಂ ಧರ್ಮದಲ್ಲಿ ಅಪನಂಬಿಕೆ, ಹೊಸತನ, ನಾಸ್ತಿಕತೆ, ಮುಂತಾದ ವಿಷಯಗಳು ಹೀಗೆ ಬಂದಿವೆ. ಒಬ್ಬ ವ್ಯಕ್ತಿಯ ಮಾತಿಗೆ ದೇವರ ವಚನಕ್ಕೆ ಎಷ್ಟು ಮಹಿಮೆ ಸಿಗಬೇಕೋ ಅಷ್ಟೇ ಮಹಿಮೆ ದೊರೆಯಿತು. ಆದ್ದರಿಂದ ಸಹಾಬಿಯರು ಹದೀಸುಗಳಿಗೆ ಪವಿತ್ರ ಖುರ್‌ಆನಿಗಿಂತ ಕಡಿಮೆ ಸ್ಥಾನವನ್ನು ನೀಡುತ್ತಿದ್ದರು. ಹಝ಼್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹದೀಸುಗಳನ್ನು ನಂತರ ಸಂಗ್ರಹಿಸಲಾಗಿದ್ದರೂ ಕೆಲವೊಮ್ಮೆ ಕೆಲವು ಸಹಾಬಿಯರು ಅವುಗಳನ್ನು ಬರೆಯುತ್ತಾ ಸಹ ಇದ್ದರು ಎಂಬುದನ್ನು ನೆನಪಿಡಬೇಕಾಗಿದೆ. ಒಂದು ಬಾರಿ ಹಝ಼್ರತ್ ಉಮರ್(ರ) ಒಂದು ವಿಷಯಕ್ಕೆ ತೀರ್ಪು ನೀಡುತ್ತಿದ್ದಾಗ, ಹದೀಸಿನಲ್ಲಿ ಹೀಗೆ ಬರೆಯಲಾಗಿದೆ ಎಂದು ಮುದುಕಿಯೊಬ್ಬಳು ಹೇಳಿದಳು. ಆದರೆ ಹಝ಼್ರತ್ ಉಮರ್(ರ) ಹೇಳಿದರು: ಒಬ್ಬಳು ಮುದುಕಿಗಾಗಿ ನಾನು ಪವಿತ್ರ ಖುರ್‌ಆನನ್ನು ಬಿಡಲು ಸಾಧ್ಯವಲ್ಲ. (ಮಲ್‌ಫೂಝಾತ್, ಸಂಪುಟ–6, ಪುಟ–266–267,

1984)

ಒಟ್ಟಿನಲ್ಲಿ ಈ ಒಂದು ರೀತಿಯನ್ನೇ ನಾವು ಪಾಲಿಸಬೇಕಾಗಿದೆ. ಹೀಗೆ ಮಾಡದಿದ್ದರೆ ನವೀನಾಚಾರಗಳು ಹರಡುತ್ತಾ ಹೋಗುವುವು. ಇದೇ ಕಾರಣದಿಂದ ಮುಸ್ಲಿಮರಲ್ಲಿ ನವೀನಾಚಾರಗಳು ಹರಡುತ್ತಿವೆ. ಅವುಗಳು ಪವಿತ್ರ ಖುರ್‌ಆನಿನ ಸರಿಯಾದ ಪಾಠಗಳಿಂದ ದೂರ ಮಾಡುತ್ತವೆ. ಸಾಮಾನ್ಯ ಮುಸ್ಲಿಮರಲ್ಲಿ ಬಹುತೇಕರು ಅಜ್ಞಾನಿಗಳಾಗಿರುತ್ತಾರೆ. ನಾಮಧಾರಿಗಳಾದ ಮುಲ್ಲಾಗಳು ಅವರನ್ನು ಕೊಂಡು ಹೋಗುವಲ್ಲಿಗೆ ಅವರು ಹೋಗುತ್ತಾರೆ ಮತ್ತು ನವೀನಾಚಾರಗಳು ಹರಡುತ್ತಾ ಹೋಗುತ್ತವೆ. ಆದರೆ ಇದಾಗಿಯೂ ನಾವು ಪವಿತ್ರ ಖುರ್‌ಆನಿನಲ್ಲಿ ಏರುಪೇರು ಮಾಡುತ್ತೇವೆ ಎಂದು ನಮ್ಮ ಮೇಲೆ ಆರೋಪ ಹೊರಿಸುತ್ತಾರೆ.

ಮುಸ್ಲಿಮರ ಅಭಿವೃದ್ಧಿಯೂ ಪವಿತ್ರ ಖುರ್‌ಆನ್‌ನೊಂದಿಗೆ ಷರತ್ತು ಬದ್ಧವಾಗಿದೆ ಎಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಎಲ್ಲಿಯ ವರೆಗೆ ಮುಸ್ಲಿಮರು ಪವಿತ್ರ ಖುರ್‌ಆನನ್ನು ಸಂಪೂರ್ಣವಾಗಿ ಪಾಲಿಸುವುದಿಲ್ಲವೋ ಮತ್ತು ಅನುಸರಿಸುವುದಿಲ್ಲವೋ ಅಲ್ಲಿಯ ವರೆಗೆ ಅವರು ಯಾವುದೇ ವಿಧದ ಪ್ರಗತಿಯನ್ನು ಹೊಂದಲಾರರು. ಪವಿತ್ರ ಖುರ್‌ಆನ್‌ನಿಂದ ಅವರು ದೂರ ಸರಿಯುತ್ತಿರುವಂತೆಯೇ, ಅವರು ಅಭಿವೃದ್ಧಿಯ ಮಾರ್ಗಗಳು ಮತ್ತು ಮಾರ್ಗದರ್ಶನಗಳಿಂದ ದೂರ ಸರಿಯುತ್ತಿದ್ದಾರೆ. ಪವಿತ್ರ ಖುರ್‌ಆನ್‌ನ ಅನುಸರಣೆಯು ಪ್ರಗತಿ ಮತ್ತು ಮಾರ್ಗದರ್ಶನದ ಮೂಲವಾಗಿದೆ. ಸರ್ವಶಕ್ತನಾದ ಅಲ್ಲಾಹನು ಹಲಾಲ್ ಆಗಿರುವ ವ್ಯಾಪಾರ, ಕೃಷಿ ಮತ್ತು ಜೀವನೋಪಾಯವನ್ನು ನಿಷೇಧಿಸಿಲ್ಲ. ಆದರೆ ಹೌದು, ಅದನ್ನು ಸ್ವತಃ ಉದ್ದೇಶವೆಂದು ಘೋಷಿಸಬಾರದು, ಬದಲಿಗೆ ಅದನ್ನು ಧರ್ಮದ ಸೇವಕನಾಗಿ ಇಡಬೇಕು. ಅದೇ ಝಕಾತ್‌ನ ಉದ್ದೇಶ, ಅಂದರೆ ಆ ಸಂಪತ್ತು ಧರ್ಮದ ಸೇವಕನಾಗಬೇಕು."

(ಮಲ್‌ಫೂಝಾತ್, ಸಂಪುಟ-8, ಪುಟ-29-30, 1984)

ಆದ್ದರಿಂದ, ವಿಶ್ವಾಸಿಯು ತನ್ನ ಜೀವನದ ಗುರಿಯನ್ನು ಜಗತ್ತನ್ನು ಗಳಿಸಲು ಮಾತ್ರ ಮಾಡಬಾರದು. ಬದಲಿಗೆ ಸರ್ವಶಕ್ತನಾದ ಅಲ್ಲಾಹನು ನಮಗೆ ತಿಳಿಸಿದ ಮನುಷ್ಯನ ಜನ್ಮದ ಉದ್ದೇಶವು ನಿಜವಾದ ಆರಾಧಕನಾಗಿ ಬದುಕುವುದು, ಅಲ್ಲಾಹನ ಆಜ್ಞೆಗಳನ್ನು ಅನುಸರಿಸುವುದಾಗಿದೆ. ಝಕಾತ್ ಮತ್ತು ದೇವರ ಮಾರ್ಗದಲ್ಲಿ ಖರ್ಚು ಮಾಡುವುದನ್ನು ಸಹ ಆದೇಶಿಸಲಾಗಿದೆ, ಆದ್ದರಿಂದ ಸಂಪತ್ತು ಕೇವಲ ಒಬ್ಬರ ಬಯಕೆಗಳನ್ನು ಪೂರೈಸಲು ಮಾತ್ರವಲ್ಲ, ಅದನ್ನು ಧರ್ಮದ ಅಭಿವೃದ್ಧಿ, ಅಲ್ಲಾಹನ ಹಕ್ಕುಗಳು ಮತ್ತು ಸೇವಕರ ಹಕ್ಕುಗಳಿಗಾಗಿ ಖರ್ಚು ಮಾಡಬೇಕು.

ಪವಿತ್ರ ಖುರ್‌ಆನ್ ಆಭರಣಗಳ ಚೀಲವಾಗಿದ್ದು, ಜನರಿಗೆ ಇದರ ಬಗ್ಗೆ ಅರಿವಿಲ್ಲ ಎಂದ ಅವರು(ಅ) ಹೇಳುತ್ತಾರೆ. ಜನರು ಉತ್ಸಾಹ ಮತ್ತು ಚಟುವಟಿಕೆಯಿಂದ ಪವಿತ್ರ ಖುರ್‌ಆನ್ ಬಗ್ಗೆ ಗಮನ ಹರಿಸದಿರುವುದು ವಿಷಾದದ ಸಂಗತಿಯಾಗಿದೆ. ಲೌಕಿಕ ವ್ಯಕ್ತಿ ತನ್ನ ಲೌಕಿಕತೆಯ ಬಗ್ಗೆ ಯೋಚಿಸುವಂತೆ ಅಥವಾ ಕವಿ ತನ್ನ ಕಾವ್ಯದ ಬಗ್ಗೆ ಯೋಚಿಸುವಂತೆಯೇ ಪವಿತ್ರ ಖುರ್‌ಆನ್ ಬಗ್ಗೆ ಯೋಚಿಸುವುದಿಲ್ಲ." ಅವರು(ಅ) ಹೇಳುತ್ತಾರೆ "ಬಟಾಲದಲ್ಲಿ ಒಬ್ಬ ಕವಿ ಇದ್ದರು. ಅವರು ಒಮ್ಮೆ ಒಂದು ಚರಣವನ್ನು ಹೇಳಿದರು," ಪರ್ಷಿಯನ್ ಭಾಷೆಯಲ್ಲಿ ಒಂದು ಚರಣವಿದೆ.

"ಸಬಾ ಶರ್ಮಂದಾ ಮೆ ಗರಿದ್ ಬೆಹ್ ರುಯಿ ಗುಲ್ ನ್ಹಾ ಕರ್ದನ್"

ಅಂದರೆ: ಆ ಸಬಾ ಹೂವಿನ ಮುಖದ ನೋಟವು ಅವಳನ್ನು ಕೆಂಪಾಗಿಸುತ್ತದೆ. "ಆದರೆ ಆತನು ಎರಡನೇ ಚರಣವನ್ನು ಹುಡುಕುತ್ತಾ ಆರು ತಿಂಗಳ ಕಾಲ ಅಲೆದಾಡಿದನು ಮತ್ತು ಆಶ್ಚರ್ಯಪಡುತ್ತಿದ್ದನು." ಆತನು ಹುಡುಕುತ್ತಲೇ ಇದ್ದನು, ಯೋಚಿಸುತ್ತಿದ್ದನು. "ಕೊನೆಗೆ ಒಂದು ದಿನ ಬಟ್ಟೆ ಕೊಳ್ಳಲು ಬಜಾರ್ ಅಂಗಡಿಗೆ ಹೋಗಿದ್ದನು. ಬಝಾಝ್ ಅನೇಕ ಬಟ್ಟೆಗಳನ್ನು ತೆಗೆದಾಗ ಅವುಗಳಲ್ಲಿ ಯಾವುದೂ ಇಷ್ಟವಾಗಲಿಲ್ಲ. ಕೊನೆಗೆ ಏನನ್ನೂ ಕೊಳ್ಳದೆ ಎದ್ದು ಹೋದಾಗ ಬಟ್ಟೆ ಮಾರುವ ಅಂಗಡಿಯವ ಬಜಾಜ್ ನೀನು ಇಷ್ಟು ಬಟ್ಟೆಗಳನ್ನು ತೆಗೆದು ಎಷ್ಟು ತೊಂದರೆ ಕೊಟ್ಟಿದ್ದೀಯಾ ಎಂದು ಸಿಟ್ಟಿಗೆದ್ದ. ಇದರ ಮೇಲೆ ಎರಡನೆಯ ಚರಣವು ಅವನಿಗೆ ಹೊಳೆಯಿತು ಮತ್ತು ಅವನು ತನ್ನ ಕವಿತೆಯನ್ನು ಹೀಗೆ ಪೂರ್ಣಗೊಳಿಸಿದನು:

"ಸಬಾ ಶರ್ಮಂದಾ ಮೆ ಗರಿದ್ ಬೆಹ್ ರುಯಿ ಗುಲ್ ನ್ಹಾ ಕರ್ದನ್ ಕೆ ರಖ್ತ್ ಗುನ್‌ಚರಾವಾ ಕರ್‌ದು ತವಾನೇಸ್ತ್ ತೆಹ್ ಕರ್ದನ್"

ಅಂದರೆ: ಆ ಸಬಾ ಹೂವಿನ ಮುಖವನ್ನು ನೋಡಿ ಮುಜುಗರಕ್ಕೊಳಗಾಗುತ್ತಾಳೆ, ಅವಳು ಗಾಂಚೆಯ ಉಡುಪನ್ನು ಬಿಚ್ಚಿಟ್ಟಳು ಆದರೆ ಅದನ್ನು ಕಟ್ಟಲು ಸಾಧ್ಯವಾಗಲಿಲ್ಲ. "ಒಂದು ಚರಣಕ್ಕಾಗಿ ಆತನು ಪಟ್ಟ ಶ್ರಮವಾಗಿದೆ" ಆ ಕವಿ "ಈಗ ಪವಿತ್ರ ಖುರ್‌ಆನ್‌ನ ಒಂದು ಶ್ಲೋಕವನ್ನು ಅರ್ಥಮಾಡಿಕೊಳ್ಳಲು ಜನರು ಅಷ್ಟು ಶ್ರಮವನ್ನು ವಹಿಸುವುದಿಲ್ಲ" ಎಂದು ಹೇಳಿದರು. (ಮಲ್‌ಫೂಝಾತ್, ಸಂಪುಟ-2, ಪುಟ-343-344, 1984)

ನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: "ಪವಿತ್ರ ಖುರ್‌ಆನ್‌ನಲ್ಲಿ ಅನೇಕ ರಹಸ್ಯಗಳು ಮತ್ತು ಚಿಹ್ನೆಗಳು ಇವೆ, ಅವು ತೌರಾತ್ ಮತ್ತು ಇಂಜೀಲ್‌ನಲ್ಲಿ ಎಲ್ಲಿವೆ? ನಂತರ ಪವಿತ್ರ ಖುರ್‌ಆನ್ ಎಲ್ಲಾ ವಿಷಯಗಳನ್ನು ಕೇವಲ ವಾದದ ಬಣ್ಣದಲ್ಲಿ ವಿವರಿಸುವುದಿಲ್ಲ, ತೌರಾತ್ ಅಥವಾ ಇಂಜೀಲ್‌ನಲ್ಲಿ ವಾದ ಮಾಡುವ ಹಾಗೆ. ಬದಲಿಗೆ ಪವಿತ್ರ ಖುರ್‌ಆನ್ ವಿಶ್ಲೇಷಣೆಯ ಬಣ್ಣವನ್ನು ಹೊಂದಿದೆ." ಪುರಾವೆಯ ರೀತಿಯಲ್ಲಿರುತ್ತದೆ. "ಅವರು ಬಲವಾದ ಮತ್ತು ಘನ ವಾದವನ್ನು ನೀಡದ ಯಾವುದನ್ನೂ ಅದು ಹೇಳುವುದಿಲ್ಲ. ಪವಿತ್ರ ಖುರ್‌ಆನ್‌ನ ವಾಕ್ಚಾತುರ್ಯವು ಮತ್ತು ಭಾಷಾ ಶೈಲಿಯೂ ಅದರೊಳಗೆ ಆಕರ್ಷಣೆಯನ್ನು ಹೊಂದಿರುವಂತೆ ಅದರ ಬೋಧನೆಯು ವೈಚಾರಿಕತೆ ಮತ್ತು ಆಕರ್ಷಣೆಯನ್ನು ಹೊಂದಿರುವಂತೆ ಅದರ ವಾದಗಳು ಪರಿಣಾಮಕಾರಿಯಾಗಿವೆ. (ಮಲ್‌ಫೂಝಾತ್, ಸಂಪುಟ-3, ಪುಟ-243-244 ಆವೃತ್ತಿ 1984)

ಆದ್ದರಿಂದ, ಪವಿತ್ರ ಖುರ್‌ಆನ್‌ನೊಂದಿಗೆ ಬೇರೆ ಯಾವುದೇ ಪುಸ್ತಕವು ಸ್ಪರ್ಧಿಸಲು ಸಾಧ್ಯವಿಲ್ಲ ಮತ್ತು ಪವಿತ್ರ ಖುರ್‌ಆನ್ ಎಲ್ಲಾ ಪುಸ್ತಕಗಳಿಗಿಂತ ಮೇಲಿರುವಂತೆ, ಪವಿತ್ರ ಪ್ರವಾದಿ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಸ್ಥಾನವೂ ಎಲ್ಲಾ ಪ್ರವಾದಿಗಳಿಗಿಂತಲೂ ಉನ್ನತ ಮಟ್ಟದಲ್ಲಿದೆ ಎಂದು ಅವರು(ಅ) ಹೇಳುತ್ತಾರೆ.

(ಮಾಲ್ಫುಝಾತ್, ಸಂಪುಟ-3, ಪುಟ-244, ಆವೃತ್ತಿ 1984)

ಆದ್ದರಿಂದ ಪವಿತ್ರ ಖುರ್‌ಆನನ್ನು ಓದುವಾಗ ಮತ್ತು ಪವಿತ್ರ ಖುರ್‌ಆನಿನಲ್ಲಿ ಏನಾದರೂ ಸಂಗತಿಯನ್ನು ನೋಡುವಾಗ ಅಲ್ಲೇ ಅದರ ಪುರಾವೆಯನ್ನು ಸಹ ಹುಡುಕಿರಿ. ನಂತರ ಪವಿತ್ರ ಖುರ್‌ಆನ್‌ನ ಗುಣಮಟ್ಟವನ್ನು ಪ್ರಸ್ತಾಪಿಸುತ್ತ ಅವರು ಪವಿತ್ರ ಖುರ್‌ಆನ್‌ನ ವಿರುದ್ಧ ಯಾವುದೇ ಮಾಂತ್ರಿಕತೆ ನಿಲ್ಲಲು ಸಾಧ್ಯವಿಲ್ಲ ಎಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: ಅದರ ಮುಂದೆ ಯಾವುದೇ ಸುಳ್ಳು ಮತ್ತು ಜಾದೂ ನಿಲ್ಲಲು ಸಾಧ್ಯವಿಲ್ಲ. ಪವಿತ್ರ ಖುರ್‌ಆನ್ ಎಂತಹ ಮಹತ್ತಾದ ಆಯುಧವಾಗಿದೆ ಎಂದರೆ, ಅದರ ಮುಂದೆ ಯಾವುದೇ ಸುಳ್ಳಿಗೆ ನಿಲ್ಲಲು ಧೈರ್ಯವೇ ಇರದು. ಇದು ಆಕಾಶೀಯ ಅಸ್ತ್ರವಾಗಿದೆ. ಅದು ಎಂದಿಗೂ ಮೊಂಡಾಗದು. ಒಟ್ಟಿನಲ್ಲಿ, ನಾವು ನಮ್ಮ ಆಧ್ಯಾತ್ಮಿಕ ಮತ್ತು ಅರಿವಿನ ಸ್ಥಿತಿಯನ್ನು ಸಹ ಉತ್ತಮಗೊಳಿಸಲು ಮತ್ತು ವಿರೋಧಿಗಳನ್ನು ಎದುರಿಸಲು ನಾವು ಪವಿತ್ರ ಖುರ್‌ಆನಿನ ಬಗ್ಗೆ ಚಿಂತಿಸುವ ಮತ್ತು ಆಲೋಚಿಸುವ ಕಡೆಗೆ ಹೆಚ್ಚಿನ ಗಮನಹರಿಸಬೇಕಾಗಿದೆ.

(ಮಲ್‌ಫೂಝಾತ್, ಸಂಪುಟ-5, ಪುಟ-27, 1984)

ಆದ್ದರಿಂದ ಈ ವಿಷಯವು ಪವಿತ್ರ ಖುರ್‌ಆನ್ ಬಗ್ಗೆ ಹೆಚ್ಚು ಗಮನ ಹರಿಸುವಂತೆ ಮಾಡುತ್ತದೆ ಇದರಿಂದ ನಾವು ನಮ್ಮ ಆಧ್ಯಾತ್ಮಿಕ ಮತ್ತು ಬೌದ್ಧಿಕ ಸ್ಥಿತಿಯನ್ನು ಸುಧಾರಿಸಬಹುದು ಮತ್ತು ವಿರೋಧಿಗಳನ್ನು ತಿರಸ್ಕರಿಸಲು ಸಾಧ್ಯವಾಗಬಹುದು.

ಪವಿತ್ರ ಖುರ್‌ಆನ್ ಅನ್ನು ಸಂಪೂರ್ಣವಾಗಿ ಅನುಸರಿಸಿ ಅದರ ಬೋಧನೆಗಳ ಪ್ರಕರ ವಿಧೇಯತೆಯನ್ನು ತೋರಿಸಿದರೆ ಸರ್ವಶಕ್ತನಾದ ಅಲ್ಲಾಹನನ್ನು ಪಡೆಯಬಹುದು. ಅದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: "ನಮಗೆ ಕೇವಲ ಒಬ್ಬರೇ ಸಂದೇಶವಾಹಕರಿದ್ದಾರೆ ಮತ್ತು ಆ ಸಂದೇಶವಾಹಕರ ಮೇಲೆ ಅವತೀರ್ಣಗೊಂಡ ಒಂದೇ ಒಮದು ಗ್ರಂಥ ಪವಿತ್ರ ಖುರ್‌ಆನ್ ಆಗಿದೆ. ಅದರ ವಿಧೇಯತೆಯಿಂದ ನಾವು ಅಲ್ಲಾಹನನ್ನು ಪಡೆಯಬಹುದು. ಪ್ರಸ್ತುತಕಾಲದಲ್ಲಿ ಫಕೀರ್‌ಗಳು, ಸಂತರು ಹಾಗೂ ಪೀಠದಿಪತಿಗಳ ವಿಧಾನಗಳು ಹಾಗೂ ಸೈಫಿಗಳು (ಸೈಫಿ ಅಂದರೆ ಯಾರಿಗಾದರೂ ಹಾನಿ ಮಾಡಲು ನಲವತ್ತು ದಿನಗಳವರೆಗೆ ನಿರಂತರವಾಗಿ ಪಠಿಸುವ ಮಂತ್ರಗಳಾಗಿವೆ) ಮತ್ತು ಇವೆಲ್ಲವೂ ಜನರನ್ನು ನೇರ ಮಾರ್ಗ ತಪ್ಪಿಸುವ ಸಾಧನಗಳಾಗಿವೆ. ಆದ್ದರಿಂದ ನೀವು ಅವುಗಳನ್ನು ತಪ್ಪಿಸಿಬೇಕು. ಈ ಜನರು ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರನ್ನು ಸಕಲ ಪ್ರವಾದಿಗಳ ಮುದ್ರೆಯನ್ನು ತಡೆಯಲು ಬಯಸುವವರಾಗಿದ್ದಾರೆ ಅಥವಾ ಅವರು ತಮ್ಮದೇ ಆದ ಪ್ರತ್ಯೇಕ ಕಾನೂನನ್ನು ರಚಿಸಿಕೊಂಡಿದ್ದಾರೆ. ಪವಿತ್ರ ಖುರ್‌ಆನ್ ಮತ್ತು ರಸೂಲುಲ್ಲಾಹ್(ಸ) ಅವರ ಆಜ್ಞೆಗಳನ್ನು ಅನುಸರಿಸುವುದು ಮತ್ತು ನಮಾಝ್ ಮತ್ತು ಉಪವಾಸ ಇತ್ಯಾದಿಗಳನ್ನು ಹೊರತುಪಡಿಸಿ ಅಲ್ಲಾಹನ ಅನುಗ್ರಹಗಳ ಬಾಗಿಲು ತೆರೆಯಲು ಬೇರೆ ಯಾವುದೇ ಕೀಲಿಯಿಲ್ಲ ಎಂದು ನೀವು ನೋಡುತ್ತೀರಾ. ಈ ದಾರಿಗಳನ್ನು ಬಿಟ್ಟು ಹೊಸ ದಾರಿ ಹಿಡಿದವನೇ,

ಅಲ್ಲಾಹನ ಮತ್ತು ಅವನ ಸಂದೇಶವಾಹಕರ(ಸ) ಆದೇಶಗಳನ್ನು ಅನುಸರಿಸದವನು ವಿಫಲವಾಗಿ ಸಾಯುತ್ತಾನೆ. (ವುಲ್‌ಫ಼ುರ್‌ಖಾತ್, ಸಂಪುಟ–5, ಪುಟ–125, ಆವೃತ್ತಿ 1984) (ಜಹಾಂಗೀರ್ ಉರ್ದು ನಿಘಂಟು ಪುಟ–923, ಜಹಾಂಗೀರ್ ಬುಕ್ಸ್ ಲಾಹೋರ್)

ಪವಿತ್ರ ಖುರ್‌ಆನ್‌ನ ಸದ್ಗುಣಗಳಲ್ಲಿ ಒಂದಾದ ಅದು ಪ್ರತಿ ಜಾತಿಗಳ ಪ್ರವಾದಿಗಳನ್ನು ನಂಬುವುದು ಅಗತ್ಯವೆಂದು ಪವಿತ್ರ ಖುರ್‌ಆನ್ ಘೋಷಿಸಿದೆ ಎಂದು ಅವರು(ಅ) ಹೇಳಿದರು: ಅವರು ಹೇಳುತ್ತಾರೆ, ಪವಿತ್ರ ಖುರ್‌ಆನ್ ಎಲ್ಲ ಜಾತಿಯ ಪ್ರವಾದಿಗಳನ್ನು ಅಂಗೀಕರಿಸಿ, ವಿವಿಧ ಜಾತಿಗಳೆಡೆಯಲ್ಲಿ ಶಾಂತಿಯನ್ನೂ ಸೌಹಾರ್ದತೆಯನ್ನೂ ಸ್ಥಾಪಿಸುವ ಒಂದು ಮಹತ್ತಾದ ಗ್ರಂಥವಾಗಿದೆ. ಜಗತ್ತಿನ ಧರ್ಮಗ್ರಂಥಗಳಲ್ಲಿ ಪವಿತ್ರ ಖುರ್‌ಆನಿಗೆ ಮಾತ್ರವೇ ಈ ಸೌಭಾಗ್ಯ ಸಿದ್ಧಿಸಿವೆ. ಪ್ರವಾದಿಗಳ ಕುರಿತು ಆ ಪವಿತ್ರ ಗ್ರಂಥ ಹೀಗೆ ಕಲಿಸುತ್ತದೆ: 'ಲಾ ನುಫರ್‍ರಿಕು ಬೈನ ಅಹದಿಮ್ಮಿನ್‌ಹುಮ್ ವ ನಹ್‌ನು ಲಹೂ ಮುಸ್ಲಿಮೂನ್' ಎಂದರೆ "ವಿಶ್ವಾಸಿಗಳೇ ಹೇಳಿರಿ: ನಾವು ಈ ಪ್ರಪಂಚದಲ್ಲಿ ಆವಿರ್ಭವಿಸಿದ ಸಕಲ ಪ್ರವಾದಿಗಳನ್ನು ನಂಬುತ್ತೇವೆ. ಕೆಲವರನ್ನು ನಂಬಿ ಮತ್ತೆ ಕೆಲವರನ್ನು ನಂಬದೆ ಅವರೆಡೆಯಲ್ಲಿ ವ್ಯತ್ಯಾಸವನ್ನು ಭಾವಿಸುವುದಿಲ್ಲ" (2: 137). ಹೀಗೆ ಶಾಂತಿಯನ್ನು ಸ್ಥಾಪಿಸುವ ಉಪದೇಶದಿಂದ ಕೂಡಿದ ಬೇರಾವುದಾದರೂ ದೈವಿಕ ಗ್ರಂಥ ಲೋಕದಲ್ಲಿದ್ದರೆ ಅದರ ಹೆಸರು ಹೇಳಿರಿ? ಸರ್ವದಾತನಾದ ಪರಮಾತ್ಮನ ಸಾರ್ವತ್ರಿಕ ಕೃಪೆಯನ್ನು ಯಾವುದಾದರೊಂದು ಗೋತ್ರಕ್ಕೋ ವರ್ಗಕ್ಕೋ ಪವಿತ್ರ ಖುರ್‌ಆನ್ ಸೀಮಿತಗೊಳಿಸುವುದಿಲ್ಲ. ಇಂತಹ ಮೈತ್ರಿಯ ಗ್ರಂಥ ಬೇರೆ ಇದ್ದರೆ ಹೇಳಿರಿ ಎಂದು ಹಝ್ರತ್ ಮಸೀಹ್ ಮೌಊದ್(ಅ) ಪಂಥಾಹ್ವಾನ ನೀಡಿರುವರು. (ಪೈಗಾಮೆ ಸುಲಹ್, ರೂಹಾನಿ ಖಝಾಇನ್, ಸಂಪುಟ–23, ಪುಟ–459)

ಪವಿತ್ರ ಖುರ್‌ಆನ್‌ನ ಒಂದು ಗುಣವೆಂದರೆ ಖುರ್‌ಆನ್ ಸ್ಪಷ್ಟ ಕ್ರಮವನ್ನು ಹೊಂದಿದೆ. ಈ ಕುರಿತು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಪವಿತ್ರ ಖುರ್‌ಆನ್ ಬಾಹ್ಯ ಕ್ರಮಕ್ಕೆ ಕಟ್ಟುನಿಟ್ಟಾಗಿ ಬದ್ಧವಾಗಿದೆ. ಮತ್ತು ಖುರ್‌ಆನ್‌ನ ವಾಕ್ಚಾತುರ್ಯದ ಹೆಚ್ಚಿನ ಭಾಗವು ಇದಕ್ಕೆ ಸಂಬಂಧಿಸಿದೆ. ಇದಕ್ಕೆ ಕ್ರಮಬದ್ಧತೆ ಕೂಡ ವಾಕ್ಚಾತುರ್ಯಕ್ಕೆ ಒಂದು ಕಾರಣವಾಗಿದೆ, ಆದರೆ ಬುದ್ಧಿವಂತಿಕೆಯ ಬಣ್ಣವನ್ನು ಹೊಂದಿರುವ ಉನ್ನತ ಮಟ್ಟದ ವಾಕ್ಚಾತುರ್ಯವಾಗಿದೆ. ಭಾಷಾಶೈಲಿ ಸಂಘಟಿತವಾಗದ ಅಥವಾ ಕಡಿಮೆ ವಾಕ್ಚಾತುರ್ಯ ಹೊಂದಿರುವ ವ್ಯಕ್ತಿಯನ್ನು ನಾವು ಎಂದಿಗೂ ಉತ್ತಮ ವಾಕ್ಚಾತುರ್ಯವುಳ್ಳವನು ಎಂದು ಕರೆಯಲು ಸಾಧ್ಯವಿಲ್ಲ." ಅಂದರೆ, ವಿಷಯವು ಸೂಕ್ತವಾದ ರೀತಿಯಲ್ಲಿ ಮತ್ತು ಪದಗಳನ್ನು ಸಂಪೂರ್ಣವಾಗಿ ವಿಷಯವನ್ನು ಆವರಸಿರುವ ರೀತಿಯಲ್ಲಿ ವಿವರಿಸುವವನನ್ನು ಮತ್ತು ನಿರರ್ಗಳವಾದ, ಸುಂದರವಾದ ಬೇಡಿಕೆಗಳನ್ನು ವ್ಯಕ್ತಪಡಿಸುವಂತಹ ಸುಂದರವಾದ ಪದಗಳನ್ನು ಬಳಸಬೇಕು ಮತ್ತು ಪದಗಳ ಕ್ರಮವೂ ಅವುಗಳಲ್ಲಿರಬೇಕು. ಹೀಗೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ ಇಂತಹ ವ್ಯಕ್ತಿಯನ್ನು ನಾವು ನಿರರ್ಗಳ ಮತ್ತು ವಾಕ್ಚಾತುರ್ಯ ಎಂದು ಕರೆಯಲು ಸಾಧ್ಯವಿಲ್ಲ. ಬದಲಿಗೆ ಯಾವ ವ್ಯಕ್ತಿಯಲ್ಲಿ ಕ್ರಮವಿರುವುದಿಲ್ಲವೊ ಆತನು ದಿಟವಾಗಿಯೂ ಮೂರ್ಖನಾಗಿರುತ್ತಾನೆ ಏಕೆಂದರೆ ಯಾರ ಭಾಷಣವು ಕ್ರಮಬದ್ಧವಾಗಿರುವುದಿಲ್ಲವೊ ಆತನ ಇಂದ್ರಿಯಾಗಳು ಸಹ ಕ್ರಮಬದ್ಧವಾಗಿಲ್ಲ ಎಂದರ್ಥ." ಅದರಲ್ಲಿ ಕ್ರಮಬದ್ಧತೆ ಇರದಿದ್ದರೆ ಆತನು ಮೂರ್ಖನು ಎಂದರ್ಥ. "ಹೀಗಿದ್ದಲ್ಲಿ, ವಾಕ್ಚಾತುರ್ಯವನ್ನು ಪ್ರತಿಪಾದಿಸುವ ಮತ್ತು ಎಲ್ಲಾ ರೀತಿಯ ಸತ್ಯದ ವಾದ ಮಾಡುವಂತಹ ದೈವವಾಣಿ ಎಂದು ಕರೆಸಿಕೊಳ್ಳುವ ಗ್ರಂಥದಲ್ಲಿ ಇಂತಹ ಅದ್ಭುತವಾದ ವಾಕ್ಚಾತುರ್ಯದ ಅಗತ್ಯ ಭಾಗದಿಂದ ವಂಚಿತವಾಗಿದ್ದರೆ ಹೇಗೆ ಸಾಧ್ಯ."
(ತಿರ್‌ಯಾಖಿಲ್ ಖುಲೂಬ್, ರೂಹಾನಿ ಖಝಾಇನ್, ಸಂಪುಟ–15, ಪುಟ–456–457 ಅಡಿಟಿಪ್ಪಣಿ)

ಪವಿತ್ರ ಖುರ್‌ಆನ್ ಸರ್ವಶಕ್ತನಾದ ಅಲ್ಲಾಹನ ವಾಣಿಯಾಗಿದೆ ಮತ್ತು ವಾಕ್ಚಾತುರ್ಯ ಮತ್ತು ಭಾಷಶೈಲಿಯಿಂದ ತುಂಬಿದೆ. ಅದರಲ್ಲಿ ಯಾವುದೇ ಕ್ರಮವಿಲ್ಲ ಎಂದು ಸಾಧ್ಯವಿಲ್ಲ. ಕೆಲವರು ಆಕ್ಷೇಪ ವ್ಯಕ್ತಪಡಿಸುವವರು ಆಕ್ಷೇಪ ಮಾಡುತ್ತಾರೆ. ಪವಿತ್ರ ಖುರ್‌ಆನ್‌ನ ಎರಡು ಪವಾಡಗಳನ್ನು ಉಲ್ಲೇಖಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತರೆ: "ಪವಿತ್ರ ಖುರ್‌ಆನ್ ಹೊರತುಪಡಿಸಿ ದೈವಪ್ರಕಾಶವನ್ನು ಪಡೆಯುವಿಕೆಗೆ ಬೇರೆ ಯಾವುದೇ ಮೂಲವಿಲ್ಲ, ಮತ್ತು ಸತ್ಯ ಹಾಗೂ ಸುಳ್ಳುಗಳ ನಡುವಿನ ವ್ಯತ್ಯಾಸವು ಶಾಶ್ವತವಾಗಿ ಉಳಿಯಬೇಕು ಎಂಬ ಉದ್ದೇಶಕ್ಕಾಗಿ ಅಲ್ಲಾಹನು ಇದನ್ನು ರಚಿಸಿದ್ದಾನೆ." ಸುಳ್ಳುಗಳು ಸತ್ಯದೊಂದಿಗೆ ಸ್ಪರ್ಧಿಸಲು ಸಾಧ್ಯವಾಗಬಾರದು ಮತ್ತು ಸಮಯದ ಕೊನೆಯವರೆಗೂ, ಉಮ್ಮತೆ ಮುಹಮ್ಮದಿಯಾದವರಿಗೆ ಈ ಎರಡು ಪವಾಡಗಳನ್ನು ನೀಡಲಾಯಿತು, ಅಂದರೆ ಪವಿತ್ರ ಖುರ್‌ಆನ್‌ನ ಪದಗಳ ಪವಾಡ ಮತ್ತು ಖುರ್‌ಆನ್‌ನ ಪದಗಳ ಪರಿಣಾಮದ ಪವಾಡ. ಎರಡು ಪವಾಡಗಳಿವೆ, "ಅದರ ವಿರುದ್ಧ ಧರ್ಮಗಳು ಸುಳ್ಳು ಆರಂಭದಿಂದ ಶಕ್ತಿಹೀನವಾಗುತ್ತವೆ. ಮತ್ತು ಖುರ್‌ಆನ್‌ನ ಪದಗಳ ಪವಾಡವು ಕೇವಲ ಪವಾಡವಾಗಿದ್ದರೆ ಮತ್ತು ಖುರ್‌ಆನ್‌ನ ಪರಿಣಾಮದ ಪವಾಡವು ಪವಾಡವಾಗದಿದ್ದರೆ, ವಂಚಿತರಾಗಿರುವ ಉಮ್ಮತೆ ಮುಹಮ್ಮದಿಯಾದ ವಿಶ್ವಾಸದ ಚಿಹ್ನೆಗಳು ಮತ್ತು ಪ್ರಕಾಶಗಳಲ್ಲಿ ಯಾವ ಉಲ್ಲಂಘನೆಯನ್ನು ಹೊಂದಿರುತ್ತಾರೆ, ಏಕೆಂದರೆ ಪ್ರತ್ಯೇಕವಾದ ವೈರಾಗ್ಯ ಮತ್ತು ಪರಿಶುದ್ಧತೆಯ ಪವಾಡಗಳ ಮಿತಿಯನ್ನು ತಲುಪಲು ಸಾಧ್ಯವಿಲ್ಲ. (ಬರಾಹೀನೆ ಅಹ್ಮದಿಯಾ, ರೂಹಾನಿ ಖಝಾಇನ್, ಸಂಪುಟ–1, ಪುಟ 292–293 ಅಡಿಟಿಪ್ಪಣಿಯ ಅಡಿಟಿಪ್ಪಣಿ ಸಂಖ್ಯೆ–1) ಪವಿತ್ರ ಖುರ್‌ಆನ್‌ನ ಬೋಧನೆಗಳನ್ನು ನಿಜವಾಗಿಯೂ ಅನುಸರಿಸಿದರೆ ಪರಿಣಾಮ ಬೀರುತ್ತದೆ.

ನಂತರ, ಪವಿತ್ರ ಖುರ್‌ಆನ್ ಅನ್ನು ಅನುಸರಿಸುವ ಮೂಲಕ ಈ ಜಗತ್ತಿನಲ್ಲಿ ಮೋಕ್ಷದ ಚಿಹ್ನೆಗಳು ಕಾಣಿಸಿಕೊಂಡವು, ಈ ಬಗ್ಗೆ ಅವರು(ಅ) ಹೇಳಿದರು: "ರಸೂಲುಲ್ಲಾಹ್(ಸ) ಅವರನ್ನು ಅನುಸರಿಸಲು ಆಧಾರವಾಗಿರುವ ಒಂದು ಗ್ರಂಥ ಪವಿತ್ರ ಖುರ್‌ಆನ್ ಆಗಿದೆ. ಅದನ್ನು ಅನುಸರಿಸಿ, ಮೋಕ್ಷದ ಚಿಹ್ನೆಗಳು ಈ ಜಗತ್ತಿನಲ್ಲಿ ಗೋಚರಿಸುತ್ತವೆ ಏಕೆಂದರೆ ಇದು ಬಾಹ್ಯ ಮತ್ತು ಆಂತರಿಕ ವಿಧಾನಗಳ ಮೂಲಕ ಅಪೂರ್ಣ ಆತ್ಮಗಳಿಗೆ ಪರಿಪೂರ್ಣತೆಯನ್ನು ತರುತ್ತದೆ ಮತ್ತು ಶಂಖೆ ಮತ್ತು ಅನುಮಾನಗಳಿಂದ ಅವರನ್ನು ಮುಕ್ತಗೊಳಿಸುವ ಅದು ಒಂದು ಗ್ರಂಥವಾಗಿದೆ." ಯಾವ ಜನರಲ್ಲಿ ಇಂದ್ರಿಯಾಸಕ್ತಿಗಳಲ್ಲಿ ಕೊರತೆ ಇರುತ್ತದೆಯೊ ಅವರ ಆ ದೌರ್ಬಲ್ಯಗಳನ್ನು ಹೋಗಲಾಡಿಸುತ್ತದೆ ಮಾತ್ರವಲ್ಲದೆ ಅವರನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುತ್ತದೆ. ಅವರು(ಅ) ಹೇಳಿದರು: "ಬಾಹ್ಯ ರೀತಿಯಲ್ಲಿ, ಹೇಳಿಕೆಯು ಎಷ್ಟು ಸಮಗ್ರವಾದ ವಿವರಗಳು ಮತ್ತು ಸತ್ಯಗಳನ್ನು ಹೊಂದಿದೆಯೆಂದರೆ, ಜಗತ್ತಿನಲ್ಲಿ ಎಷ್ಟು ಅನುಮಾನಗಳಿವೆಯೋ ಅಷ್ಟೇ ದೇವರನ್ನು ತಲುಪುವುದನ್ನು ತಡೆಯುತ್ತದೆ, ಅದರಲ್ಲಿ ತಲ್ಲೀನರಾಗಿ ನೂರಾರು ಸುಳ್ಳು ಪಂಥಗಳು ಹರಡುತ್ತಿವೆ ಮತ್ತು ನೂರಾರು ರೀತಿಯ ಸುಳ್ಳು ಆಲೋಚನೆಗಳು ದಾರಿತಪ್ಪಿದ ಜನರ ಹೃದಯದಲ್ಲಿ ಹೆಪ್ಪುಗಟ್ಟುತ್ತಿವೆ, ಅವೆಲ್ಲವನ್ನೂ ಅದರಲ್ಲಿ (ಪವಿತ್ರ ಖುರ್‌ಆನ್) ತಾರ್ಕಿಕವಾಗಿ ನಿರಾಕರಿಸಲಾಗಿದೆ." ಪವಿತ್ರ ಖುರ್‌ಆನ್ ಸ್ಪಷ್ಟವಾದ ಪುರಾವೆಗಳೊಂದಿಗೆ ಮತ್ತು ಸತ್ಯಾಂಶಗಳನ್ನು ನಿನರಿಸುತ್ತದೆ ಎಂದರೆ ಎಲ್ಲಾ ರೀತಿಯ ಅವಮಾನಗಳ ನಿವಾರಣೆ ಇದರಿಂದ ಆಗುತ್ತದೆ. ಹೌದು, ಷರತ್ತು ಏನೆಂದರೆ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದು ಮತ್ತು ಅರ್ಥಮಾಡಿಸುವವರ ಮಾತುಗಳಿಂದ ಪ್ರಯೋಜನ ಪಡೆಯುವುದು ಅವಶ್ಯಕವಾಗಿದೆ. ಅವರು(ಅ) ಹೇಳಿದರು: "ಮತ್ತು ಸತ್ಯ ಮತ್ತು ಪರಿಪೂರ್ಣತೆಯ ಎಲ್ಲಾ ಬೋಧನೆಗಳು, ಪ್ರಸ್ತುತ ಅಂಧಕಾರದ ಕಾಲಕ್ಕೆ ಅವಶ್ಯವಾಗಿತ್ತು ಅವೆಲ್ಲವು ಇದರಲ್ಲಿ ಸೂರ್ಯನಂತೆ ಹೊಳೆಯುತ್ತಿದೆ." ಪ್ರಸ್ತುತ ಯುಗದಲ್ಲಿಯೂ ಕತ್ತಲೆಯು ಹರಡುತ್ತಿದೆ. ಧರ್ಮದಿಂದ ದೂರವಿದೆ, ಅನೈತಿಕತೆ ಇದೆ, ಮತ್ತು ಸರ್ವಶಕ್ತನಾದ ಅಲ್ಲಾಹನಿಂದ ದೂರವಿದೆ, ಈ ಎಲ್ಲಾ ಅಂಧಕಾರಗಳನ್ನು ತೊಡೆದುಹಾಕಲು ಮತ್ತು ಬೆಳಕನ್ನು ಪಡೆಯಲು, ಪವಿತ್ರ ಖುರ್‌ಆನ್ ಕಡೆಗೆ ಮರಳಬೇಕು ಇದು ಎಲ್ಲವನ್ನೂ ಒಳಗೊಂಡಿದೆ.

ಇದೆಲ್ಲವೂ ಸೂರ್ಯನಂತೆ ಹೊಳೆಯುತ್ತಿದೆ ಎಂದು ಹೇಳಿದ್ದಾರೆ. ಇದು ಸೂರ್ಯನಂತೆ ಪ್ರಕಾಶಮಾನವಾಗಿದೆ ಮತ್ತು ಎಲ್ಲಾ ಮಾನಸಿಕ ಕಾಯಿಲೆಗಳ ಚಿಕಿತ್ಸೆಯು ಅದರಲ್ಲಿ ಸೇರಿದೆ ಮತ್ತು ಸತ್ಯದ ಎಲ್ಲಾ ಜ್ಞಾನದ ವಿವರಣೆಯು ಅದರಲ್ಲಿ ತುಂಬಿದೆ ಮತ್ತು ಭವಿಷ್ಯದಲ್ಲಿ ಕಾಣಿಸಿಕೊಳ್ಳುವ ನಿಖರವಾದ ದೈವಜ್ಞಾನವಿಲ್ಲ ಮತ್ತು ಅದರಿಂದ ಹೊರಗುಳಿದಿದೆ. ಮತ್ತು ಆಂತರಿಕವಾಗಿ ಅದರ ಪರಿಪೂರ್ಣ ವಿಧೇಯತೆಯು ಹೃದಯವನ್ನು ಎಷ್ಟು ಶುದ್ಧಗೊಳಿಸುತ್ತದೆ," ಇದು ಪರಿಪೂರ್ಣ ವಿಧೇಯತೆಯ ಸ್ಥಿತಿಯಾಗಿದೆ. ವಿಧೇಯತೆಯು ಪರಿಪೂರ್ಣವಾಗಿದ್ದರೆ, ಒಬ್ಬ ವ್ಯಕ್ತಿಯು ಆಂತರಿಕ ಮಾಲಿನ್ಯದಿಂದ ಸಂಪೂರ್ಣವಾಗಿ ಮುಕ್ತನಾಗುವ ರೀತಿಯಲ್ಲಿ ಹೃದಯವನ್ನು ಶುದ್ಧೀಕರಿಸುತ್ತಾನೆ ಮತ್ತು ಪರಮಾತ್ಮನೊಂದಿಗೆ ಸಂಪರ್ಕವನ್ನು ಪಡೆಯುತ್ತಾನೆ. ಕಷ್ಟ, ಕರುಣೆ ಮತ್ತು ಸಹಾನುಭೂತಿಯ ಪರಿಪೂರ್ಣತೆಯು ಸರ್ವಶಕ್ತನಾದ ಅಲ್ಲಾಹನಿಂದ ಆಗಿದೆ ಮತ್ತು ಕೆಲವೊಮ್ಮೆ ಅವನು ತನ್ನ ಕಷ್ಟಗಳು ಮತ್ತು ಅನೇಕ ದುಃಖಗಳ ಸಮಯದಲ್ಲಿ ಸಾವಿರಾರು ಬಾರಿ ಕೇಳಿದರೆ, ಸಾವಿರಾರು ಬಾರಿ ಅವನು ತನ್ನ ಭಗವಂತನಿಂದ ಬಹಳ ನಿರರ್ಗಳವಾಗಿ ಪ್ರೀತಿಯ ಉತ್ತರವನ್ನು ಪಡೆಯುತ್ತಾನೆ. ಮತ್ತು ರುಚಿಕರವಾದ ಮತ್ತು ಅನುಗ್ರಹಿಸಿದ ಪದಗಳು ಮತ್ತು ದೈವವಾಣಿಯು ಅವನ ಮೇಲೆ ದೈವಿಕ ಮಳೆಯಂತೆ ಸುರಿಯುತ್ತದೆ, ಮತ್ತು ಅವನು ತನ್ನ ಹೃದಯವನ್ನು ದೈವಿಕ ಪ್ರೀತಿಯಿಂದ ತುಂಬಿರುವುದನ್ನು ಕಂಡುಕೊಳ್ಳುತ್ತಾನೆ. ಮತ್ತು ಅತ್ಯಂತ

ಸ್ಪಷ್ಟವಾದ ಗಾಜಿನು ಸೂಕ್ಷ್ಮವಾದ ಸುಗಂಧ ದ್ರವ್ಯದಿಂದ ತುಂಬಿರುತ್ತದೆ ಮತ್ತು ಪ್ರೀತಿ ಮತ್ತು ಉತ್ಸಾಹದ ಶುದ್ಧ ಆನಂದವನ್ನು ಅವನಿಗೆ ನೀಡಲಾಗುತ್ತದೆ. ಅದು ಅವನ ಕಟ್ಟುನಿಟ್ಟಾದ ಭಾವನಾತ್ಮಕ ಸರಪಳಿಗಳನ್ನು ಮುರಿದು ಅವನನ್ನು ಈ ಹೊಗೆಮನೆಯಿಂದ ಹೊರತೆಗೆಯುವ ಮೂಲಕ, ಅಂದರೆ, ಕೊಳಕು ಗಾಳಿ ಮತ್ತು ಕಲುಷಿತ ಗಾಳಿ, ಹೊಗೆ, ನಿಜವಾದ ಪ್ರೀತಿಯ ತಂಪಾದ ಮತ್ತು ಸಾಂತ್ವನದ ಗಾಳಿಯೊಂದಿಗೆ ಅವನನ್ನು ಹೊರತೆಗೆಯುವ ಮೂಲಕ ಮತ್ತು ಪ್ರತಿ ಕ್ಷಣವೂ ತಾಜಾ ಜೀವನವನ್ನು ನೀಡುತ್ತಲೇ ಇರುತ್ತದೆ." (ಬರಾಹೀನೆ ಅಹ್ಮದಿಯಾ, ರೂಹಾನಿ ಖಝಾಈನ್, ಸಂಪುಟ-1, ಪುಟ-345-349, ಉಳಿದ ಅಡಿಟಿಪ್ಪಣಿ ಸಂಖ್ಯೆ-2)

ನಂತರ ಅವರು(ಅ) ಪವಿತ್ರ ಖುರ್‌ಅನ್ ಒಂದು ಖಚಿತವಾದ ಮತ್ತು ನಿರ್ಣಾಯಕ ಪದವಾಗಿದೆ ಎಂದು ಹೇಳಿದರು.

ಅವರು(ಅ) ಹೇಳುತ್ತಾರೆ: "ಪವಿತ್ರ ಖುರ್‌ಆನ್, ಇದು ಸರ್ವಶಕ್ತನಾದ ಅಲ್ಲಾಹನ ಪುಸ್ತಕವಾಗಿದೆ, ಅದಕ್ಕಿಂತ ಹೆಚ್ಚು ನಿರ್ದಿಷ್ಟ ಮತ್ತು ನಿಶ್ಚಿತ ಪದವು ನಮ್ಮ ಕೈಯಲ್ಲಿ ಇಲ್ಲ." ಇದು ದೈವವಾಣಿಯಾಗಿದೆ. ಆತನು ಅನುಮಾನ ಮತ್ತು ಸಂದೇಹಗಳಿಂದ ಮುಕ್ತನಾಗಿದೆ. (ಬಟಾಲ್ವಿ ಮತ್ತು ಚಕ್ಡಾಲ್ವಿಯ ಚರ್ಚೆಯ ವಿಮರ್ಶೆ, ರೂಹಾನಿ ಖಝಾಈನ್, ಸಂಪುಟ-19, ಪುಟ-209)

ಪವಿತ್ರ ಖುರ್‌ಆನ್ ಪ್ರಪಂಚದ ಎಲ್ಲಾ ಜಾತಿಗಳನ್ನು ಒಗ್ಗೂಡಿಸಲು ಬಂದಿದೆ ಎಂದು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನು ಮೊದಲು ಬೇರೆ ಬೇರೆಯಾಗಿ ಪ್ರತಿಯೊಂದು ಸಮುದಾಯಕ್ಕೆ ಬೇರೆ ಬೇರೆ ಮಾರ್ಗಸೂಚಿಗಳನ್ನು ಕಳುಹಿಸಿದನು. ಅನಂತರ ಅಲ್ಲಾಹನು ಏಕನಾಗಿರುವ ಹಾಗೆಯೇ ಅದು ಸಹ ಒಂದಾಗಬೇಕೆಂದು ಅಲ್ಲಾಹನು ಬಯಸಿದನು. ಆಗ ಎಲ್ಲರನ್ನು ಒಂದುಗೂಡಿಸಲಿಕ್ಕಾಗಿ ಪವಿತ್ರ ಖುರ್‌ಆನನ್ನು ಕಳುಹಿಸಿದನು. ಅಲ್ಲಾಹನು ಎಲ್ಲಾ ಜಾತಿಗಳನ್ನು ಒಂದೇ ಜಾತಿ ಮತ್ತು ಎಲ್ಲಾ ದೇಶಗಳನ್ನು ಒಂದೇ ದೇಶವನ್ನಾಗಿ ಮಾಡುವ ಮತ್ತು ಎಲ್ಲಾ ಭಾಷೆಗಳನ್ನು ಒಂದೇ ಭಾಷೆಯನ್ನಾಗಿ ಮಾಡುವ ಸಮಯ ಬರಲಿದೆ ಎಂದು ತಿಳಿಸಿದರು. (ನಸೀಮೆ ದಲ್‌ವತ್, ರೂಹಾನಿ ಖಝಾಈನ್, ಸಂಪುಟ-19, ಪುಟ-209)

ವಿವಿಧ ಧರ್ಮಗಳು ಏಕೆ ಬಂದವು? ಎಂದು ಜನರು ಹೇಳುತ್ತಾರೆ. ಏಕೆಂದರೆ ಆ ಸಮಯದವರೆಗೆ ಅವರ ಬುದ್ಧಿಶಕ್ತಿ ಮತ್ತು ಪ್ರಜ್ಞೆ ಮತ್ತು ಅವರಲ್ಲಿದ್ದ ಸಂಪನ್ಮೂಲಗಳು ಅವರ ಕಾಲದಲ್ಲಿ ತುಂಬಾ ಸೀಮಿತವಾಗಿತ್ತು. ಹಿಂದೆ ಪ್ರತ್ಯೇಕವಾಗಿ ಕಳುಹಿಸಲಾಗಿದೆ. ಆದರೆ ಈಗ ಎಲ್ಲರೂ ಒಗ್ಗೂಡುವ ಸಮಯ ಬಂದಿದೆ, ನಂತರ ಪವಿತ್ರ ಖುರ್‌ಆನ್‌ನ ರೂಪದಲ್ಲಿ ಪರಿಪೂರ್ಣ ಕಾನೂನನ್ನು ನಮಗೆ ಕಳುಹಿಸಲಾಗಿದೆ ಮತ್ತು ಅದು ಎಲ್ಲಾ ದೇಶಗಳನ್ನು ಒಂದೇ ದೇಶವನ್ನಾಗಿ ಮಾಡುತ್ತದೆ ಮತ್ತು ಎಲ್ಲಾ ಭಾಷೆಗಳನ್ನು ಒಂದು ಭಾಷೆಯನ್ನಾಗಿ ಮಾಡುತ್ತದೆ ಎಂದು ಹೇಳಿದರು. ಇಂದು, ಜಾಗತಿಕ ಗ್ರಾಮ ಎಂಬ ಪದವನ್ನು ಜಗತ್ತಿನಲ್ಲಿ ಬಳಸಲಾಗುತ್ತದೆ. ಅದು ಜಗತ್ತು ಒಂದಾಯಿತು, ಅದು ನಗರವಾಯಿತು. ಆದಾಗ್ಯೂ, ಪವಿತ್ರ ಖುರ್‌ಆನ್ ಒಂದು ಪದವಾಗಿದ್ದು, ಜಗತ್ತಿನಲ್ಲಿ ಮಾತನಾಡುವ ವಿವಿಧ ಭಾಷೆಗಳಿವೆ, ಆದರೆ ಜಗತ್ತಿನಲ್ಲಿ ಎಲ್ಲೆಲ್ಲಿ ಮುಸ್ಲಿಮರು ಇದ್ದಾರೆ ಮತ್ತು ಅವರು ಮುಸ್ಲಿಮರಾಗಿದ್ದರೂ ಅವರು ಅದನ್ನು(ಪವಿತ್ರ ಖುರ್‌ಆನನ್ನು) ಅರೇಬಿಕ್ ಭಾಷೆಯಲ್ಲಿ ಪಠಿಸುತ್ತಾರೆ. ಮತ್ತು ಅದೇ ರೀತಿ ಐದು ಪ್ರಾರ್ಥನೆಗಳಲ್ಲಿ ಇದನ್ನು ಬಳಸಲಾಗುತ್ತದೆ.

